ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಶ್ರೀ ಅಶೋಕ್ ಕುಮಾರ್ ವಿರುದ್ಧ ಪರಮೇಶ್ವರ ಬಿ.ಟಿ.

ಕ್ರಿಮಿನಲ್ ಅಪೀಲುಸಂಖ್ಯೆ: 686/2014, ದಿನಾಂಕ 11 ನೇ ಅಕ್ಟೋಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ದಿನಾಂಕ:07.07.2014 ರ ತೀರ್ಪಿನ ಮೂಲಕ ಕ್ರಿಮಿನಲ್ ಅಪೀಲುಸಂಖ್ಯೆ: 390/2013 ರಲ್ಲಿ ತ್ವರಿತಗತಿ ನ್ಯಾಯಾಲಯ-II, ಬೆಂಗಳೂರು (ಸಂಕ್ಷಿಪ್ತವಾಗಿ " ಪ್ರಥಮ ಅಪೀಲು ನ್ಯಾಯಾಲಯ " ಎಂದು ಉಲ್ಲೇಖಿಸಲಾಗಿದೆ) ದಾಖಲಿಸಿದ ಖುಲಾಸೆ ತೀರ್ಪಿನ ವಿರುದ್ಧ ಬಾಧಿತ ಫಿರ್ಯಾದುದಾರರು ಈ ಅಪೀಲು ಸಲ್ಲಿಸಿದ್ದಾರೆ.

2. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಯೆಂದರೆ, ಇದರಲ್ಲಿನ ಅಪೀಲುದಾರ ಶ್ರೀ ಅಶೋಕ್ ಕುಮಾರ್, ಫಿರ್ಯಾದುದಾರರಾಗಿದ್ದು, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ರ (ಸಂಕ್ಷಿಪ್ತವಾಗಿ ' ಎನ್.ಐ. ಅಧಿನಿಯಮ) 138 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಇದರಲ್ಲಿನ ಎದುರುದಾರರಾದ (ಆರೋಪಿ) ಪರಮೇಶ್ವರ ಎಂಬುವವರ ವಿರುದ್ಧ III ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟಿನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ ದೂರನ್ನು ದಾಖಲಿಸಿದ್ದಾರೆ.ಸಂಕ್ಷಿಪ್ತ ಆರೋಪಗಳೆಂದರೆ, ಆರೋಪಿಯುದಿನಾಂಕ: 08.11.2010 ರಂದು, ಫಿರ್ಯಾದುದಾರರಿಗೆ ನೀಡಬೇಕಾಗಿದ್ದ 3,00,000/- ರೂ.ಗಳ (ಮೂರು ಲಕ್ಷ ರೂಪಾಯಿಗಳು) ಮೊತ್ತಕ್ಕೆ 365473 ಸಂಖ್ಯೆಯನ್ನು ಹೊಂದಿರುವ ಒಂದು ಚೆಕ್ ಅನ್ನು ಕಾನೂನುಬದ್ಧವಾಗಿ ಕಾನೂನ ಜಾರಿಗೊಳಿಸಬಹುದಾದ ಸಾಲ ತೀರಿಕೆಗಾಗಿ ನೀಡಿದ್ದರು.ಸದರಿ ಚೆಕ್‌ಅನ್ನು ಫಿರ್ಯಾದುದಾರರ ಬ್ಯಾಂಕರ್ಗೆ ಹಾಜರುಪಡಿಸಲಾಗಿ, ' ಸಾಕಷ್ಟು ಹಣವಿಲ್ಲ ' ಎಂಬ ಹಿಂಬರಹದೊಂದಿಗೆ ಅದನ್ನು ಹಿಂತಿರುಗಿಸಲಾಗಿತ್ತು.ನಿರ್ದಿಷ್ಟ ಸಮಯದೊಳಗೆ ಶಾಸನಾತ್ಮಕ ನೋಟೀಸನ್ನು ನೀಡಿದ ನಂತರ, ದೂರನ್ನು ಸಲ್ಲಿಸಲಾಗಿದೆ.ಸದರಿ ದೂರನ್ನು ಸಿ.ಸಿ.ಸಂಖ್ಯೆ: 18350/2011 ರಲ್ಲಿ ದಾಖಲಿಸಲಾಗಿತ್ತು ಮತ್ತು ಆ ತರುವಾಯ, ಆರೋಪಿಗೆ ಸಮನುಗಳನ್ನು ನೀಡಲಾಗಿತ್ತು.ಸಮನುಗಳನ್ನು ನೀಡಿದಾಗ್ಯೂ, ಆರೋಪಿಯು ನ್ಯಾಯಾಲಯದ ಮುಂದೆ ಹಾಜರಾಗಲಿಲ್ಲ.ಆದಾಗ್ಯೂ, ಅಂತಿಮವಾಗಿ ಜಾಮೀನುರಹಿತ ವಾರಂಟ್ನ ಮೇರೆಗೆ ಆರೋಪಿಯನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಆರೋಪಿಯನ್ನು ಹಲವಾರು ಕಾರಣಗಳಿಗಾಗಿ ತೀವ್ರವಾಗಿ ಪ್ರಶ್ನಿಸಲಾಯಿತು.

3. ದಾಖಲೆಯಲ್ಲಿದ್ದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳ ಗುಣಾರ್ಹತೆಗಳನ್ನು ನಿರ್ಧರಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು, ಫಿರ್ಯಾದುದಾರರು ಸಂಶಯಾತೀತವಾಗಿ ತಮ್ಮ ವಾದವನ್ನು ಸಾಬೀತುಪಡಿಸಿದ್ದಾರೆಂಬ ನಿರ್ಧಾರಕ್ಕೆ ಬಂದು, ಎನ್.ಐ. ಅಧಿನಿಯಮದ 138 ನೇ ಪ್ರಕರಣದ ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ಆರೋಪಿಯ ಅಪರಾಧವನ್ನು ನಿರ್ಣಯಿಸಿತು ಮತ್ತು ಆರು ತಿಂಗಳುಗಳ ತಪ್ಪಿತ

ಸೆರವಾಸದ ಶಿಕ್ಷೆ ಸಹಿತ 3,05,000/- ರೂ.ಗಳ ಜುಲ್ಮಾನೆಯನ್ನು ವಿಧಿಸಿತು ಹಾಗೂ ಫಿರ್ಯಾದುದಾರರಿಗೆ ಪರಿಹಾರವಾಗಿ 3,00,000/- ರೂ.ಗಳ (ಮೂರು ಲಕ್ಷ ರೂಪಾಯಿಗಳು) ಐತೀರ್ಪನ್ನು ನೀಡಿತು.

4. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಸದರಿ ತೀರ್ಪು ಮತ್ತು ಜಾರಿ ಮಾಡಿದ ಶಿಕ್ಷೆಯಿಂದ ಬಾಧಿತರಾಗಿ, ಅಪೀಲುದಾರ/ಆರೋಪಿಯು ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಿದ್ದು, ಅದನ್ನು ಕ್ರಿಮಿನಲ್ ಅಪೀಲುಸಂಖ್ಯೆ: 390/2013 ರಲ್ಲಿ ದಾಖಲಿಸಲಾಯಿತು; ಅದರಲ್ಲಿ, ಪ್ರಥಮ ಅಪೀಲು ನ್ಯಾಯಾಲಯವು, ನಿಶಾನೆ ಪಿ -5 ಮತ್ತು ಪಿ -6 ರಲ್ಲಿ ಗುರುತಿಸಲಾದ ಸ್ವೀಕೃತಿ ಪ್ರಕಾರ, ನಿಶಾನೆ ಪಿ -4 ರಲ್ಲಿ ನೀಡಲಾದ ನೋಟೀಸನ್ನು ಆರೋಪಿಗೆ ಜಾರಿ ಮಾಡಲಾಗಿಲ್ಲ ಎಂಬ ಏಕೈಕ ಕಾರಣದ ಮೇಲೆ ಆರೋಪಿಯನ್ನು ಖುಲಾಸೆಗೊಳಿಸಿತು.ಆದುದರಿಂದ ಸದರಿ ಖುಲಾಸೆ ತೀರ್ಪಿನಿಂದ ಬಾಧಿತರಾಗಿ, ಫಿರ್ಯಾದುದಾರರು ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

5. ಪ್ರಥಮ ಅಪೀಲು ನ್ಯಾಯಾಲಯದ ಇಡೀ ತೀರ್ಪನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗಿ, ಅಪೀಲುದಾರರು ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಅನ್ವಯಿಸಿ ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ವಿವಿಧ ಕಾರಣಗಳನ್ನು ಅವಲಂಬಿಸಿದ್ದಾರೆ ಹಾಗೂ ಪ್ರಥಮ ಅಪೀಲು ನ್ಯಾಯಾಲಯವು, ತೀರ್ಪಿನ 11 ನೇ ಕಂಡಿಕೆಯಲ್ಲಿ ಅಪೀಲಿನ ಎಲ್ಲಾ ಕಾರಣಗಳನ್ನು ನಮೂದಿಸಿದೆ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಅಪರಾಧವನ್ನು ನಿರ್ಣಯಿಸಿದ ಕಾರಣಗಳನ್ನು ಸಹ ನಿರೂಪಿಸಿದೆ ಎಂಬುದು ಕಂಡುಬರುತ್ತದೆ.ಆದಾಗ್ಯೂ, ಎನ್.ಐ. ಅಧಿನಿಯಮದ 138 ನೇ ಪಕರಣದ ಪ್ರಕಾರ ಶಾಸನಾತ್ಮಕ ನೋಟೀಸನ್ನು ಜಾರಿ ಮಾಡಿದ ಅಥವಾ ಮಾಡದಿರುವ ಉಲ್ಲೇಖದೊಂದಿಗಿನ ಕಾರಣವನ್ನು ಹೊರತುಪಡಿಸಿ, ಅಪೀಲು ನ್ಯಾಯಾಲಯವು ಅಪೀಲುದಾರರು ವಾದಿಸಿದ ಇತರ ಕಾರಣಗಳ ಕಡೆ ಗಮನ ಹರಿಸಿರುವುದಿಲ್ಲ.

6. ಅಪೀಲು ನ್ಯಾಯಾಲಯವು ಮುಖ್ಯವಾಗಿ ನಿಶಾನೆ ಪಿ -5 ಮತ್ತು ಪಿ -6 ಎಂದು ಗುರುತಿಸಲಾದ ದಸ್ತಾವೇಜುಗಳನ್ನು ಹಾಗೂ ಫಿರ್ಯಾದು ವಾದಗಳನ್ನಲ್ಲದೆ, ನಿಶಾನೆ ಪಿ -4 ರಲ್ಲಿ ಗುರುತಿಸಲಾದ ಕಾನೂನುಬದ್ಧ ನೋಟೀಸಿನ ಅಂಶಗಳ ಕಡೆಗೆ ಗಮನ ಕೇಂದ್ರೀಕರಿಸಿದೆ.ಫಿರ್ಯಾದುದಾರರು ಆರೋಪಿಯ ವಿಳಾಸದ ನಿರೂಪಣೆಗೆ ಸಂಬಂಧಿಸಿದಂತೆ ಕೆಲವು ವ್ಯತ್ಯಾಸಗಳಿವೆ ಎಂದು ನ್ಯಾಯಾಲಯಕ್ಕೆ ಕಂಡುಬಂದಿದ್ದು, ಅದರಿಂದಾಗಿ ಅದು, ಕಾನೂನುರೀತ್ಯಾ ನೋಟೀಸಿನಲ್ಲಿ ಹಾಗೂ ಫಿರ್ಯಾದಿನ ವ್ಯಾಜ್ಯಪಟ್ಟಿಯಲ್ಲಿ ಅಷ್ಟೇ ಅಲ್ಲದೆ ನಿಶಾನೆ ಪಿ -5 ಮತ್ತು ಪಿ -6 ರಲ್ಲಿ ಗುರುತಿಸಲಾದ ಸ್ವೀಕೃತಿಗಳಲ್ಲಿ ಉಲ್ಲೇಖಿಸಿದ ವಿಳಾಸ ಹಾಗೂ ಆರೋಪಿಯ ಮನೆ ವಿಳಾಸ ಬೇರೆ ಬೇರೆಯಾಗಿವೆ ಎಂಬ ನಿರ್ಣಯಕ್ಕೆ ಬಂದಿದೆ.ಆದುದರಿಂದ, ನೋಟೀಸನ್ನು ವಾಸ್ತವವಾಗಿ ಜಾರಿ ಮಾಡಿದ ಹೊರತು, ನೋಟೀಸಿನ ಜಾರಿಯನ್ನು, ಭಾವಿತ ಜಾರಿ ಎಂದು ಪರಿಗಣಿಸಲಾಗುವುದಿಲ್ಲ ಅಥವಾ ಪೂರ್ವಭಾವನೆಯಾಗುವುದಿಲ್ಲ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿತು.ಆದುದರಿಂದ, ನ್ಯಾಯಾಲಯವು, ನೋಟೀಸಿನ ವಾಸ್ತವ ಜಾರಿಯನ್ನು ಫಿರ್ಯಾದುದಾರರು ಸಾಬೀತುಪಡಿಸಿರಲಿಲ್ಲವೆಂದು ನಿರ್ಣಯಿಸಿತು.ಆದುದರಿಂದ, ಅಪೀಲು ನ್ಯಾಯಾಲಯವು ಅಪೀಲುದಾರರನ್ನು ಖುಲಾಸೆಗೊಳಿಸಿತು.

7. ಈಗ ಮೇಲೆ ಟಿಪ್ಪಣಿ ಮಾಡಿದ ಕಾರಣದ ಗುಣಾರ್ಹತೆಗೆ ಬರುವುದಾದರೆ, ವಾಸ್ತವವಾಗಿ ಅಪೀಲು ನ್ಯಾಯಾಲಯವು, ಮನೆ ವಿಳಾಸಕ್ಕೆ ಸಂಬಂಧಪಟ್ಟಂತೆ ಅಧಿವಿಚಾರಣಾ ನ್ಯಾಯಾಲಯವು, ಬಹುತೇಕವಾಗಿ ಪರಸ್ಪರ ಸಾಕಷ್ಟು ಹೋಲಿಕೆಯಾಗುವ ಸ್ವೀಕೃತಿಗೆ ಸಂಬಂಧಿಸಿದಂತೆ ಮಾಡಿರುವ ಅಭಿಪ್ರಾಯದ ಬಗ್ಗೆ 14 ನೇ

ಕಂಡಿಕೆಯಲ್ಲಿ ಚರ್ಚಿಸಿದೆ; ಇದಲ್ಲದೆ, ಆರೋಪಿಯು ಕೊನೆಯದಾಗಿ ತಿಳಿದಿರುವ ವಿಳಾಸಕ್ಕೆ ಸ್ವೀಕೃತಿಯ ಸಮೇತ ಅಂಚೆ ಲಕೋಟೆಯನ್ನು ಕಳುಹಿಸಿರುವ ಕಾರಣ, ನೋಟೀಸಿನ ಭಾವಿತ ಜಾರಿಯಾಗಿತ್ತು ಎಂದು ಅಧಿವಿಚಾರಣಾ ನ್ಯಾಯಾಲಯವು ನಿರ್ಣಯಿಸಿತ್ತು.ಆರೋಪಿಯ ಪಾಟಿ-ಸವಾಲಿನಲ್ಲಿ " ತಾನು ಸದರಿ ವಿಳಾಸದಲ್ಲಿ ವಾಸಿಸುತ್ತಿದ್ದೆ " ಎಂದು ಒಪ್ಪಿಕೊಡಿರುವುದನ್ನು ಸಹ ಅಧಿವಿಚಾರಣಾ ನ್ಯಾಯಾಲಯವು ಗಮನಕ್ಕೆ ತೆಗೆದುಕೊಂಡಿದೆ.ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು ನೋಟೀಸಿನ ಭಾವಿತ ಜಾರಿಯಾಗಿತ್ತು ಎಂಬ ನಿರ್ಣಯಕ್ಕೆ ಬಂದಿದೆ.ಅಧಿವಿಚಾರಣಾ ನ್ಯಾಯಾಲಯವು ತನ್ನ ಮುಂದೆ ಫಿರ್ಯಾದುದಾರರು ಮತ್ತು ಆರೋಪಿಯು ವಾದಿಸಿದ ಇತರ ಕಾರಣಗಳನ್ನು ಪರಿಗಣಿಸಿದ ನಂತರ ಆರೋಪಿಯ ಅಪರಾಧವನ್ನು ನಿರ್ಣಯಿಸಿತ್ತು ಎಂಬುದು ಕಂಡುಬರುತ್ತದೆ.ಆದುದರಿಂದ, ಈ ಹಿನ್ನೆಲೆಯಲ್ಲಿ, ಈಗ ಈ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಏಕೈಕ ಪ್ರಶ್ನೆ ಎಂದರೆ, ಪ್ರಥಮ ಅಪೀಲು ನ್ಯಾಯಾಲಯವು, ' ನೋಟೀಸನ್ನು ವಾಸ್ತವವಾಗಿ ಆರೋಪಿಗೆ ಜಾರಿಗೊಳಿಸಲಾಗಿಲ್ಲ ' ಎಂಬ ನಿರ್ದಿಷ್ಟ ಮತ್ತು ಏಕೈಕ ಕಾರಣದ ಆಧಾರದ ಮೇಲೆ ಮಾತ್ರವೇ ಆರೋಪಿಯನ್ನು ಖುಲಾಸೆಗೊಳಿಸಿರುವುದು ಸರಿಯಾದ ಕ್ರಮವೇ ಎಂಬುದಾಗಿದೆ.

8. ಸಹಜವಾಗಿಯೇ, ಎನ್.ಐ. ಅಧಿನಿಯಮದ 138 ನೇ ಪ್ರಕರಣವು ಸ್ವತಃ ಕಡ್ಡಾಯ ಉಪಬಂಧವಾಗಿದ್ದು, ಅದು, ಆರೋಪಿಯು ನೀಡಿದ ಚೆಕ್ ಬೌನ್ಸ್ಗೆ ಸಂಬಂಧಿಸಿದಂತೆ ಎನ್.ಐ. ಅಧಿನಿಯಮದ 138 ನೇ ಪ್ರಕರಣದ ಅಡಿಯಲ್ಲಿ ಫಿರ್ಯಾದುದಾರರು ನೋಟೀಸನ್ನು ಜಾರಿ ಮಾಡಬೇಕೆಂಬುದನ್ನು ಮತ್ತು ಕಾನೂನು ರೀತ್ಯಾ ನೋಟೀಸನ್ನು ಅನುಸರಿಸಿ ಸದರಿ ಮೊತ್ತವನ್ನು ಸಂದಾಯ ಮಾಡುವಂತೆ ಆರೋಪಿಯನ್ನು ಕೇಳಬೇಕೆಂದು ಅದು ಕಡ್ಡಾಯಪಡಿಸುತ್ತದೆ.ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ, ಆರೋಪಿಯು ನೋಟೀಸನ್ನು ಅನುಸರಿಸಬೇಕು, ಇಲ್ಲವೇ ನೋಟೀಸನ್ನು ಅನುಸರಿಸದೆ ಇರುವುದಕ್ಕೆ ಕಾರಣಗಳ ಸಹಿತ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು.ಈ ಮೊಕದ್ದಮೆಯಲ್ಲಿ ಒಪ್ಪಿಕೊಂಡಿರುವಂತೆ, ಆರೋಪಿಯು ತನಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಎಂಬ ರಕ್ಷಣೆಯನ್ನು ತೆಗೆದುಕೊಂಡಿರುವುದರಿಂದ, ಅವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

9. ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಫಿರ್ಯಾದಿನಲ್ಲಿ ಉಲ್ಲೇಖಿಸಿದ ವಿಳಾಸ ಹಾಗೂ ನೋಟೀಸಿನ ಒಳಾಂಶಗಳ ಕಡೆಗೆ ನನ್ನ ಗಮನ ಸೆಳೆದಿದ್ದಾರೆ.ಸಹಜವಾಗಿಯೇ, ಫಿರಾದಿನಲ್ಲಿರುವ ವಿಳಾಸವನ್ನು ವಿವರಿಸುವಲ್ಲಿ ಕೆಲವು ಚಿಕ್ಕಪುಟ್ಟ ವ್ಯತ್ಯಾಸವಾಗಿದೆ.ಅದರಲ್ಲಿ ನಮೂದಿಸಿರುವ ವಿಳಾಸ ಈ ಕೆಳಗಿನಂತಿದೆ:

" ಶ್ರೀ ಬಿ.ಟಿ. ಪರಮೇಶ್ವರ, ತಂದೆ ತಿಮ್ಮಣ್ಣ ಭಟ್, ವಾಸ:ಸಂಖ್ಯೆ: 2161, 1 ನೇ ಮಹಡಿ ಔಟ್ ಹೌಸ್, 8 ನೇ ' ಎ ' ಮುಖ್ಯ ರಸ್ತೆ, II ನೇ 6 2 ಬಾಣ ಕ್, ರಾಜಾಜಿನಗರ II ನ್ ಹ ಂ ತ, ಬೆಂಗಳೂರು -10 "

ನೋಟೀಸಿನಲ್ಲಿ (ನಿಶಾನೆ ಪಿ -4) ಸಹ, ಈ ಕೆಳಗಿನಂತೆ ವಿಳಾಸವನ್ನು ನಮೂದಿಸಲಾಗಿದೆ:

"ಸಂಖ್ಯೆ: 2161, 1 ನೇ ಮಹಡಿ, ಔಟ್ ಹೌಸ್, 8 ನೇ ' ಎ ' ಮುಖ್ಯ ರಸ್ತೆ, 2 ನೇ ' ಇ ' ಬ್ಲಾಕ್, ರಾಜಾಜಿನಗರ II ನೇ ಹಂತ, ಬೆ ಂ ಗಳೂರು "

(ನಿಶಾನೆ ಪಿ -5 ಎಂದು ಗುರುತಿಸಲಾಗಿರುವ ಅಂಚೆ ಸ್ವೀಕೃತಿಯಲ್ಲೂ ಸಹ, ಈ ಕೆಳಗಿನಂತೆ ವಿಳಾಸವನ್ನು ನಮೂದಿಸಲಾಗಿದೆ:

" ಶ್ರೀ ಬಿ.ಟಿ. ಪರಮೇಶ್ವರ, ತಂದೆ ತಿಮ್ಮಣ್ಣ ಭಟ್, ವಾಸ:ಸಂಖ್ಯೆ: 2161, 1 ನೇ ಮಹಡಿ ಔಟ್ ಹೌಸ್, 8 ನೇ ' ಎ ' ಮುಖ್ಯ ರಸ್ತೆ, II ನೇ ' 6 ಇ ' ಬ್ಲಾಕ್, ರಾಜಾಜಿನಗರ II ನೇ ಹಂತ, ಬೆಂಗಳೂರು -10 "

ಆದುದರಿಂದ, ಮೇಲಿನ ಸದರಿ ವಿಳಾಸವನ್ನು ಗಮನಿಸಲಾಗಿ, ಸಹಜವಾಗಿಯೇ, ರಾಜಾಜಿನಗರ, ಬೆಂಗಳೂರು -10 ರ ಬ್ಲಾಕ್ ಮತ್ತು ಹಂತಗಳನ್ನು ವಿವರಿಸುವಲ್ಲಿ ಸಣ್ಣ ವ್ಯತ್ಯಾಸವಾಗಿದೆ.ಆದರೆ, ಅಫಿಡಾವಿಟ್ ಮೂಲಕ ನೀಡಿದ ಸಾಕ್ಷ್ಯದಲ್ಲಿ ಆರೋಪಿಯು, ತಾನು ಪ್ರಸ್ತುತ 5 ನೇ ಹಂತ, ಯಲಹಂಕ ನ್ಯೂ ಟೌನ್, ಬೆಂಗಳೂರಿನಲ್ಲಿ ವಾಸಿಸುತ್ತಿರುವುದಾಗಿ ಹೇಳಿದ್ದಾರೆ.ಆದಾಗ್ಯೂ, ಅವರು ಪಾಟಿ-ಸವಾಲು ನಡೆದ ಸಮಯದಲ್ಲಿ, ತಾನುಸಂಖ್ಯೆ: 1261, 8 ನೇ ' ಎ ' ಮುಖ್ಯ ರಸ್ತೆ, I ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರಿನಲ್ಲಿ ವಾಸಿಸುತ್ತಿದ್ದೆ ಎಂದು ಒಪ್ಪಿಕೊಂಡಿದ್ದಾರೆ.ಪಾಟಿ-ಸವಾಲಿನಲ್ಲಿಯೂ ಸಹ, ಯಾವಾಗ ನಿರ್ದಿಷ್ಟ ವಿಳಾಸದ ಸ್ಥಳವನ್ನು ತೊರೆದರು ಎಂಬುದನ್ನು ವಿವರಿಸಿರುವುದಿಲ್ಲ.ಸ್ವೀಕೃತಿಯಲ್ಲಿ (ನಿಶಾನೆ ಪಿ -5) ನಮೂದಿಸಿದ ವಿಳಾಸವು ತಪ್ಪಾಗಿದೆ ಮತ್ತು ಅಂಥ ಯಾವುದೇ ವಿಳಾಸವನ್ನು ನೀಡಿದ್ದಲ್ಲಿ, ಅಲ್ಲಿಗೆ ನೋಟೀಸನ್ನು ಜಾರಿ ಮಾಡಬಾರದು ಅಥವಾ ಸದರಿ ಸ್ಥಳವನ್ನು ತಲುಪುವುದಿಲ್ಲ ಎಂಬುದನ್ನು ಅವರು ಎಂದಿಗೂ ಹೇಳಿರುವುದಿಲ್ಲ.ಆದಾಗ್ಯೂ, ಪ್ರಸ್ತುತ ವಿಳಾಸವಾದ ಬೆಂಗಳೂರಿನ ಯಲಹಂಕದಲ್ಲಿರುವುದಕ್ಕೆ ಮೊದಲು, ತಾನು ಸಂಖ್ಯೆ:2161, ರಾಜಾಜಿನಗರ, ಬೆಂಗಳೂರಿನಲ್ಲಿ ವಾಸವಾಗಿದ್ದುದಾಗಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದು, ಅದನ್ನು ನಿಶಾನೆ ಪಿ -5 ರಲ್ಲಿ ನಮೂದಿಸಲಾಗಿದೆ.

10. ಮನೆ ಸಂಖ್ಯೆಯನ್ನು 2161 ಎಂದು ನಮೂದಿಸುವಲ್ಲಿ ಕೆಲವು ಹೊಡೆದು ಹಾಕಿದ ಬರಹ ಇದೆ ಎಂಬುದನ್ನು ಪಿಡಬ್ಲ್ಯು -1 ಒಪ್ಪಿಕೊಂಡಿದ್ದಾರೆಂದು ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದಿಸಿದ್ದಾರೆ.ಆದರೆ, ವಾಸ್ತವವಾಗಿ ಅದನ್ನು ಯಾರು ಮಾಡಿದ್ದರು ಎಂಬುದನ್ನು ಆರೋಪಿಯು ವಿವರಿಸಿರುವುದಿಲ್ಲ.ಕೆಲವು ಹೊಡೆದು ಹಾಕಿದ ಬರಹಗಳಿವೆಯೆಂದು ಪರಿಗಣಿಸಿದರೂ ಸಹ, ಅದನ್ನು ವಾಸ್ತವವಾಗಿ ಯಾವಾಗ ತೋರಿಸಲಾಯಿತು ಎಂಬ ಪ್ರಶ್ನೆಯನ್ನು ಪರಿಗಣಿಸಬೇಕಾಗುತ್ತದೆ.ಫಿರ್ಯಾದುದಾರರು ವಿಳಾಸದಲ್ಲಿ ಕೆಲವು ವಿರಳ ವ್ಯತ್ಯಾಸಗಳಿದ್ದವು ಎಂಬುದರ ಬಗ್ಗೆ ಚೆನ್ನಾಗಿ ಗೊತ್ತಿದ್ದು ಈ ದಸ್ತಾವೇಜುಗಳನ್ನು ದೂರಿನ ಮತ್ತು ನೋಟೀಸಿನ ಪ್ರತಿಯೊಂದಿಗೆ ಹಾಜರುಪಡಿಸಿದ್ದಾರೆ.ವಾಸ್ತವವಾಗಿ ಅವರು ದಸ್ತಾವೇಜುಗಳನ್ನು ಬದಲಿಸಲು ಬಯಸಿದ್ದರೆ, ದೂರನ್ನು ಸಲ್ಲಿಸುವ ಸಮಯದಲ್ಲೇ ಎಲ್ಲಾ ದಸ್ತಾವೇಜುಗಳನ್ನು ಅವರು ಬದಲಿಸಬಹುದಾಗಿತ್ತು, ಎಂದರೆ ನೋಟೀಸಿನ ಒಳಾಂಶಗಳನ್ನು ಅವರು ಸರಿಪಡಿಸಬಹುದಾಗಿತ್ತು, ಅಷ್ಟೇ ಅಲ್ಲದೆ ಅವರು ದೂರಿನ ವ್ಯಾಜ್ಯಪಟ್ಟಿಯಲ್ಲಿ ಸರಿಯಾದ ವಿಳಾಸವನ್ನು ನಮೂದಿಸಬಹುದಾಗಿತ್ತು.ಆದರೆ, ಅವರು ಅದನ್ನು ಮಾಡಿರುವುದಿಲ್ಲ.ಆದುದರಿಂದ, ಆರೋಪಿಯು ತೆಗೆದುಕೊಳ್ಳಬಹುದಾದಂಥ ಪ್ರತಿವಾದದ ನಿರೀಕ್ಷೆಯ ಸಮಯದಲ್ಲಿ ಈ ದಸ್ತಾವೇಜನ್ನು ಬದಲಿಸಲಾಗಿದೆ ಎಂದು ಹೇಳಲಾಗುವುದಿಲ್ಲ.ಪ್ರಾಯಶಃ, ನೋಟೀಸನ್ನು ಜಾರಿ ಮಾಡುವ ಸಮಯದ ಕೊನೇ ಕ್ಷಣದಲ್ಲಿ, ಮನೆ ಸಂಖ್ಯೆಯು 2161 ' ಎಂದು ಆತನಿಗೆ ಗೊತ್ತಾಗಿರಬಹುದು.ಆದುದರಿಂದ, ಅವರು ಅದನ್ನು ಸರಿಪಡಿಸಿದ್ದಾರೆ.ವಿಳಾಸದ ಇನ್ನೊಂದು ಭಾಗಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅದನ್ನು 2 ನೇ ' ಇ ' ಬ್ಲಾಕ್, ರಾಜಾಜಿನಗರ, ಬೆಂಗಳೂರು -10 ಎಂದು ನಮೂದಿಸಲಾಗಿದೆ.ಮಾನ್ಯ ನ್ಯಾಯವಾದಿಗಳು 2 ನೇ ' ಇ ' ಬ್ಲಾಕ್ ಎಂಬಂಥದ್ದೇನೂ ಇಲ್ಲವೆಂದು ವಾದಿಸಿದ್ದಾರೆ.II ನೇ ಹಂತದಲ್ಲಿ ' ಇ ' ಬ್ಲಾಕ್ ಮಾತ್ರ ಇದೆ ಎಂಬುದು ವಾದವಾಗಿದೆ. ಆ ಸಂದರ್ಭದಲ್ಲಿ, ವಿಳಾಸವು ತಪ್ಪಾಗಿದ್ದರೆ, ಅಂಚೆ ಲಕೋಟೆಯು ಆ ನಿರ್ದಿಷ್ಟ ಸ್ಥಳವನ್ನು ತಲುಪುತ್ತಲೇ ಇರಲಿಲ್ಲ.

11. ಮೇಲೆ ಹೇಳಿದ ಸಂದರ್ಭಗಳ ಹಿನ್ನೆಲೆಯಲ್ಲಿ, ನಿಶಾನೆ ಪಿ -5 ರಲ್ಲಿ ನಮೂದಿಸಿದ ವಿಳಾಸವು ಗಣನೀಯವಾಗಿ ತಪ್ಪಾದುದಾಗಿದೆ ಮತ್ತು ಯಾವುದೇ ಲಕೋಟೆಯನ್ನು ಆ ವಿಳಾಸಕ್ಕೆ ಕಳುಹಿಸಿದರೆ, ಅದು ಸ್ಥಳವನ್ನು ತಲುಪುವುದಿಲ್ಲ ಎಂಬುದನ್ನು ವಿವರಿಸುವ ಹೊಣೆ ಆರೋಪಿಯದ್ದಾಗಿದೆ.ಇದೂ ಅಲ್ಲದೆ, ಸದರಿ ಲಕೋಟೆಯನ್ನು ಬಹುಶಃ ಸದರಿ ವಿಳಾಸದಲ್ಲಿರುವ ಯಾರೋ ಒಬ್ಬ ಅಧಿಕೃತ ವ್ಯಕ್ತಿಯು ಸ್ವೀಕರಿಸಿದ್ದರು.ಆದುದರಿಂದ, ಫಿರ್ಯಾದುದಾರರಿಗೆ ಜಾರಿಯಾಗದೆ ಅಂಚೆ ಲಕೋಟೆಯು ಹಿಂತಿರುಗುವ ಅವಕಾಶವೇ ಇರಲಿಲ್ಲ.

12. ಮೇಲಿನ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಫಿರ್ಯಾದುದಾರರ ಹಕ್ಕುಗಳನ್ನು ವಿಫಲಗೊಳಿಸುವ ಸಲುವಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಆರೋಪಿಯು ಹಾಜರಾದ ನಂತರ, ಈ ನಿರ್ದಿಷ್ಟ ಪ್ರತಿವಾದವನ್ನು ಮಾಡಿರಬೇಕು.ಏನೇ ಇದ್ದರೂ, ನೋಟೀಸನ್ನು ಜಾರಿ ಮಾಡುವ ಉದ್ದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಡಿ. ವಿನೋದ್ ಶಿವಪ್ಪ ಚ –ವಿರುದ್ಧ-ನಂದ ಬೆಳ್ಳಿಯಪ್ಪ 1 ' ಮೊಕದ್ದಮೆಯ ಸುಸಂಗತ ಭಾಗದಲ್ಲಿ ವಿವರಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:(16 ನೇ ಮತ್ತು 17 ನೇ ಕಂಡಿಕೆಗಳು):

"16. ಮೇಲೆ ಗಮನಿಸಿದಂತೆ, ನೋಟೀಸನ್ನು ಅಗತ್ಯಪಡಿಸುವ ಒಟ್ಟಾರೆ ಉದ್ದೇಶವು, ನೋಟೀಸನ್ನು ಜಾರಿ ಮಾಡಿದ 15 ದಿನಗಳ ಒಳಗಾಗಿ ಚೆಕ್ ಮೊತ್ತವನ್ನು ಸಂದಾಯ ಮಾಡಲು ಧನಾದೇಶಕನಿಗೆ ಅವಕಾಶ ನೀಡುವುದಾಗಿದ್ದು, ಆ ಮೂಲಕ 138 ನೇ ಪ್ರಕರಣದ ದಂಡನೆಯ ಪರಿಣಾಮಗಳಿಂದ ಆತನನ್ನು ಮುಕ್ತಗೊಳಿಸುವುದಾಗಿದೆ. ವಿನೋದ್ ಶಿವಪ್ಪ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ: "ಯಾರೇ ಆಗಲಿ, ಸದುದ್ದೇಶದ ಧನಾದೇಶಕನು ಬರೆದ ಚೆಕ್‌ಅನ್ನು ಅಂಗೀಕರಿಸಲು ಆತನು ಪ್ರಾಮಾಣಿಕವಾಗಿ ಉದ್ದೇಶಿಸಿದಾಗ, ಆತನ ನಿಯಂತ್ರಣವನ್ನು ಮೀರಿದ ಕಾರಣಗಳಿಗಾಗಿ ಅವಶ್ಯಕ ಏರ್ಪಾಡುಗಳನ್ನು ಮಾಡಲು ಅಜಾಗರೂಕತೆಯಿ ಂ ದ ತಪ್ಪಿರಬಹುದಾಗಿರುವ ಸಂದರ್ಭಗಳನ್ನು ಸಹ ಗ್ರಹಿಸಬಹುದಾಗಿದೆ.ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯತನದಿಂದ ಆಗುವ ಅಂಥ ಲೋಪಗಳನ್ನು ಕಾನೂನು ಕ್ಷಮಾರ್ಹವೆಂದು ಪರಿಗಣಿಸುತ್ತದೆ; ಪರಂತು, ನೋಟೀಸನ್ನು ಜಾರಿ ಮಾಡಿದ ನಂತರ ಧನಾದೇಶಕನು ತಿದ್ದಿಕೊಂಡು, ನಿಯಮಿಸಲಾದ ಅವಧಿಯೊಳಗೆ ಮೊತ್ತವನ್ನು ಸಂದಾಯ ಮಾಡಬೇಕು.ಈ ಕಾರಣಕ್ಕಾಗಿಯೇ 138 ನೇ ಪ್ರಕರಣದ ಪರಂತುಕದ (ಸಿ) ಖಂಡವು, ಸದರಿ ನೋಟೀಸನ್ನು ಸ್ವೀಕರಿಸಿದ 15 ದಿನಗಳ ಒಳಗಾಗಿ, ಚೆಕ್‌ಅನ್ನು ಬರೆದ ಧನಾದೇಶಕನು ಹಣ ಸಂದಾಯ ಮಾಡಲು ವಿಫಲವಾದ ಹೊರತು ಈ ಪ್ರಕರಣವನ್ನು ಅನ್ವಯಿಸ ತಕ್ಕದ್ದಲ್ಲವೆ ಂ ದು ಉಪ ಬ ಂ ಧಿ ಸ ಂ ತದೆ. ಪುನರುಚ್ಚರಿಸುವುದಾದರೆ, ಈ ಪರಂತುಕವು, ಯಾವ ಪ್ರಾಮಾಣಿಕ ಧನಾ ದೇಶ ಕನ ಕ ನ ಚೆಕ್ಕಳು ಇತರರ ತಪ್ಪಿನಿ ಂ ದಾಗಿ ಅಂಗೀಕಾರಾರ್ಹವಾಗುವುದಿಲ್ಲವೋ ಅಥವಾ ತಮ್ಮ ವಾಗ್ದಾನವನ್ನು ಈಡೇರಿಸಲು ಪ್ರಾಮಾಣಿಕವಾಗಿ ಬಯಸಿದ್ದು, ಆದರೆ ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯತನದಿಂದ ಚೆಕ್ನ ಸ ಂ ದಾಯಕ್ಕೆ ಅವಶ್ಯಕ ಏರ್ಪಾಡುಗಳನ್ನು ಮಾಡಲು ವಿಫಲನಾಗುವನೋ, ಆ ಧನಾದೇಶಕನನ್ನು ರಕ್ಷಿಸುವ ಉದ್ದೇಶ ಹೊಂದಿದೆ.ತಾವು ನೀಡಿದ ಚೆಕ್ಕಳನ್ನು ಅಂಗೀಕರಿಸುವ ಉದ್ದೇಶವನ್ನು ಎಂದಿಗೂ ಹೊಂದಿರದಂಥ, ಮುಗ್ಧ ವ್ಯಕ್ತಿಗಳನ್ನು ವಂಚಿಸುವುದನ್ನು ತಮ್ಮ ಕಾರ್ಯರೀತಿಯನ್ನಾಗಿಸಿಕೊಂಡ ನಿರ್ಲಜ್ಜ ಧನಾದೇಶಕರನ್ನು ರಕ್ಷಿಸುವ ಉದ್ದೇಶವನ್ನು ಈ ಪರಂತುಕವು ಉದ್ದೇಶಿಸಿರುವುದಿಲ್ಲ.

17. ನೋಟೀಸನ್ನು ನೀಡುವ ಅಗತ್ಯತೆಯು, ಸ್ಪಷ್ಟವಾಗಿ ಅಪರಾಧಿಕ ಕಾನೂನು ನಿಯಮದಿಂದ ದೂರ ಸರಿಯುವ ಪ್ರಕ್ರಿಯೆಯಾಗಿದ್ದು, ಅಲ್ಲಿ ದೂರನ್ನು ದಾಖಲಿಸುವ ಮೊದಲು ನೋಟೀಸು ನೀಡುವುದನ್ನು ನಿಯಮಿಸಿರುವುದಿಲ್ಲ ಎಂಬುದನ್ನು ಸಹ ಗಮನದಲ್ಲಿ ಇಟ್ಟುಕೊಳ್ಳಬೇಕು.ಅಂಚೆ ಮೂಲಕ ನೋಟೀಸನ್ನು ತಾನು ಸ್ವೀಕರಿಸಿಲ್ಲ ಎಂದು ಕ್ಲೇಮು ಮಾಡುವ ಯಾರೇ ಧನಾದೇಶಕನು, ಅಧಿನಿಯಮದ 138 ನೇ ಪ್ರಕರಣದ ಅಡಿಯಲ್ಲಿನ ದೂರಿನ ಸಂಬಂಧದಲ್ಲಿ ನ್ಯಾಯಾಲಯದಿಂದ ಸಮನುಗಳನ್ನು ಸ್ವೀಕರಿಸಿದ 15 ದಿನಗಳ ಒಳಗಾಗಿ, ಚೆಕ್ ಮೊತ್ತವನ್ನು ಸಂದಾಯ ಮಾಡಬಹುದು ಮತ್ತು ಸಮನುಗಳನ್ನು ಸ್ವೀಕರಿಸಿದ (ಸಮನುಗಳೊಂದಿಗೆ ದೂರಿನ ಪ್ರತಿಯನ್ನು ಸ್ವೀಕರಿಸುವ ಮೂಲಕ) 15 ದಿನಗಳ ಒಳಗಾಗಿ ತಾನು ಮೊತ್ತ ಸಂದಾಯ ಮಾಡಿರುವುದಾಗಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಬಹುದು ಮತ್ತು ಆದುದರಿಂದ ದೂರು ತಳ್ಳಿಹಾಕಲು ಅರ್ಹವಾಗಿದೆ.ಅಧಿನಿಯಮದ 138 ನೇ ಪ್ರಕರಣದ ಅಡಿಯಲ್ಲಿ ದೂರಿನ ಪ್ರತಿಯೊ ಂ ದಿಗೆ ನ್ಯಾಯಾಲಯದಿಂದ ಸಮನುಗಳನ್ನು ಸ್ವೀಕರಿಸಿದ 15 ದಿನಗಳ ಒಳಗಾಗಿ ಸಂದಾಯ ಮಾಡದ ವ್ಯಕ್ತಿಯು, ಸಾಮಾನ್ಯ ಖಂಡಗಳ ಅಧಿನಿಯಮದ 27 ನೇ ಪ್ರಕರಣ ಮತ್ತು ಸಾಕ್ಷ್ಯ ಅಧಿನಿಯಮದ 114 ನೇ ಪ್ರಕರಣಗಳಿಗೆ ತದ್ವಿರುದ್ಧವಾಗಿ ಶಾಸನಾತ್ಮಕ ಪೂರ್ವಭಾವನೆಯನ್ನು ನಿರ್ಲಕ್ಷಿಸುವ ಮೂಲಕ, 138 ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ, ನೋಟೀಸನ್ನು ಸೂಕ್ತವಾಗಿ ಜಾರಿ ಮಾಡಿರಲಿಲ್ಲವೆ ಂ ದು ನಿಸ್ಸಂಶಯವಾಗಿಯೂ ವಾದಿಸಲಾಗುವುದಿಲ್ಲ.ನಮ್ಮ ಅಭಿಪ್ರಾಯದಲ್ಲಿ, ಈ ಪರಂತುಕದ ಇನ್ನಾವುದೇ ಅರ್ಥವಿವರಣೆಯು ಶಾಸನದ ನೈಜ ಉದ್ದೇಶವನ್ನೇ ವಿಫಲಗೊಳಿಸುವುದು.ಭಾಸ್ಕರನ್ ಮೊಕದ್ದಮೆಯಲ್ಲಿ (ಮೇಲೆ ಹೇಳಿದ) ಅಭಿಪ್ರಾಯಪಟ್ಟಿರುವಂತೆ, ಪರಂತುಕದ (ಬಿ) ಖಂಡದ ಸಂದರ್ಭದಲ್ಲಿ ನೋಟೀಸನ್ನು ನೀಡಿದರೆ, ಅದು ವಂಚಕ ಚೆಕ್ ಧನಾದೇಶಕನು ಬೇರೆ ಬೇರೆ ಕಾರ ತಂತ್ರಗಳನ್ನು ಅಳವಡಿಸಿಕೊಂಡು ನೋಟೀಸನ್ನು ಸ್ವೀಕರಿಸುವುದನ್ನು ತಪ್ಪಿಸಲು ಹೆಚ್ಚಿನ ಬೆಲೆಯನ್ನು ಪಡೆಯುತ್ತಾನೆ ಮತ್ತು ಅಧಿನಿಯಮದ 138 ನೇ ಪ್ರಕರಣದ ಕಾನೂನು ಪರಿಣಾವಗಳಿ ಂ ದ ತಪ್ಪಿಸಿಕೊಳ್ಳುತ್ತಾನೆ. "

13. ಆದುದರಿಂದ, ಫಿರ್ಯಾದುದಾರರು ಕಳುಹಿಸಿದ ನೋಟೀಸಿನಲ್ಲಿ, ' ಹಂತ ಮತ್ತು ' ಬ್ಲಾಕ್'ಗಳನ್ನು ವಿವರಿಸುವಲ್ಲಿ ಕೆಲವು ವ್ಯತ್ಯಾಸಗಳಿದ್ದಾಗ್ಯೂ, ವಿಳಾಸದ ಗಣನೀಯ ಭಾಗವು ಅದೇ ಆಗಿದೆ ಮತ್ತು ಪ್ರತಿವಾದದಲ್ಲಿ ಆರೋಪಿಯು ಸದರಿ ವಿಳಾಸದಲ್ಲಿ ತಾನು ವಾಸಿಸುತ್ತಿದ್ದುದಾಗಿ ಒಪ್ಪಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದೆ.ಒಬ್ಬ ವ್ಯಕ್ತಿಯು ತನ್ನ ವಿಳಾಸವನ್ನು ಬದಲಾಯಿಸಿದಾಗಲೆಲ್ಲಾ, ತನಗೆ ಸಂಬಂಧಿಸಿದ ಯಾವುದೇ ಪತ್ರವು ಆ ನಿರ್ದಿಷ್ಟ ವಾಸಸ್ಥಳಕ್ಕೆ ತಲುಪುವಂತೆ, ಅದನ್ನು ಆತನ ಹೊಸ ವಿಳಾಸಕ್ಕೆ ಹೋಗುವಂತೆ ಮರು-ರವಾನಿಸುವಂತೆ ನೋಡಿಕೊಳ್ಳಲು ಕಾರವ್ಯಾಪ್ತಿಯುಳ್ಳ ಅಂಚೆ ಕಚೇರಿಗೆ ಅದನ್ನು ತಿಳಿಸುವುದು ಅಥವಾ ಅಂಥ ಪತ್ರಗಳನ್ನು ಸ್ವೀಕರಿಸಲು ಸದರಿ ವಿಳಾಸದಲ್ಲಿ ವಾಸಿಸುವ ಯಾರನ್ನಾದರೂ ಅಧಿಕೃತಗೊಳಿಸುವುದು ಆತನ ಕರ್ತವ್ಯವಾಗಿರುತ್ತದೆ ಎಂಬುದು ಮೂಲಭೂತ ತತ್ವವಾಗಿದೆ.ಈ ಮೊಕದ್ದಮೆಯಲ್ಲಿ, ಆರೋಪಿಯು ವಾಸ್ತವವಾಗಿ ಅಂಥ ಅಂಚೆ ವಸ್ತುಗಳನ್ನು ಸ್ವೀಕರಿಸಲು ಅಂಥ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.ಆರೋಪಿಯು ಅಂಥ ನಿಲುವನ್ನು ತೆಗೆದುಕೊಳ್ಳದಿದ್ದಲ್ಲಿ, ಆರೋಪಿಯ ಸದರಿ ಸ್ಥಳಕ್ಕೆ ಕಳುಹಿಸಿದ ನೋಟೀಸು ತಲುಪಿದೆ ಎಂದೇ ನ್ಯಾಯಾಲಯವು ಪೂರ್ವಭಾವನೆ ಮಾಡುತ್ತದೆ.ಹಾಗಿಲ್ಲದಿದ್ದರೂ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಸರಿಯಾಗಿಯೇ ವಾದಿಸಿರುವಂತೆ, ದೂರಿನಲ್ಲಿ ನಮೂದಿಸಿದ ವಿಳಾಸಕ್ಕೆ ನೀಡಬೇಕೆಂದು ಸಮನುಗಳಲ್ಲಿ ಆದೇಶಿಸಲಾಗಿತ್ತಾದ್ದರಿಂದ, ಒಪ್ಪಿಕೊಂಡಿರುವಂತೆ ಆರೋಪಿಯು ಅ ಂ ಚೆ ಪ್ರಾಧಿಕಾರಗಳಿಗೆ ಸೂಚನೆ ನೀಡದೆ ಬದಲಾಯಿಸಿರುವ ವಿಳಾಸಕ್ಕೆ, ಆರೋಪಿಗೆ ನೀಡಿದ ಸಮನುಗಳನ್ನು

ಜಾರಿಗೊಳಿಸಲಾಗಿರುವುದಿಲ್ಲ.ನಿರ್ದಿಷ್ಟವಾಗಿ ಜಾಮೀನುರಹಿತ ವಾರಂಟನ್ನು ಹೊರಡಿಸಿದಾಗ, ಪೊಲೀಸ್ ಸಿಬ್ಬಂದಿಯು ಹೊಸ ವಿಳಾಸವನ್ನು ಹುಡುಕಿ, ಆರೋಪಿಯನ್ನು ವಶಕ್ಕೆ ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ.ಈ ನಿರ್ದಿಷ್ಟ ಸಂಗತಿಯು, ಸಮನುಗಳು ಜಾರಿಯಾಗುವುದರಿಂದ ತಪ್ಪಿಸಿಕೊಳ್ಳಲು ಆರೋಪಿಯು ಕಾವ್ಯಸಾಧ್ಯವಿದ್ದಷ್ಟೂ ಪ್ರಯತ್ನಿಸಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತದೆ.

14. ಮೇಲಿನದಲ್ಲದೆ, ವಿನೋದ್ ಶಿವಪ್ಪ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ನಿರ್ಣಯದಲ್ಲಿ ಗಮನಿಸಲಾದಂತೆ, ನ್ಯಾಯಾಲಯದ ಮುಂದೆ ಹಾಜರಾದ ನಂತರ ಕೂಡಲೇ, ದೂರಿನ ಇತರ ಭಾಗಗಳಿಗೆ ಸಂಬಂಧಿಸಿದಷ್ಟರಮಟ್ಟಿಗೆ, ವಾಸ್ತವವಾಗಿ ಅವರು ಯಾವುದೇ ಕುಂದುಕೊರತೆಯನ್ನು ಹೊಂದಿರದೆ ಇದ್ದರೆ, ನೋಟೀಸಿನ ಅನುಪಾಲನೆ ಮಾಡಬಹುದಾಗಿತ್ತು.ಆದರೆ, ಇಲ್ಲಿ ಆರೋಪಿಯು ನೋಟೀಸಿನ ಜಾರಿಯನ್ನು ಅಲ್ಲಗಳೆದಿರುವುದಷ್ಟೇ ಅಲ್ಲದೆ, ತನ್ನ ಹಾಗೂ ಫಿರ್ಯಾದುದಾರರ ನಡುವಿನ ಇಡೀ ವ್ಯವಹಾರವನ್ನೇ ಅಲ್ಲಗಳೆದಿದ್ದಾರೆ.ದೂರಿನಲ್ಲಿ ಹೇಳಿರುವಂತೆ, ಅವರು ಆರೋಪಿಸಲಾದ ಚೆಕ್‌ಅನ್ನು ನೀಡಿರುವುದನ್ನು; ಚೆಕ್ ಮೇಲಿರುವ ಸಹಿಯನ್ನು; ಚೆಕ್‌ಅನ್ನು ಹಾಜರುಪಡಿಸಿದ್ದನ್ನು ಮತ್ತು ಚೆಕ್ ಅಂಗೀಕಾರವಾಗದಿರುವುದನ್ನು ಎಂದಿಗೂ ಅಲ್ಲಗಳೆದಿಲ್ಲ.ಆದುದರಿಂದ, ತನ್ನ ಹಾಗೂ ಫಿರ್ಯಾದುದಾರರ ನಡುವೆ ವ್ಯವಹಾರ ನಡೆದೇ ಇಲ್ಲ ಹಾಗೂ ನಿರುಪಾಧಿಕವಾಗಿ ಫಿರ್ಯಾದುದಾರರು ಯಾವುದೇ ಸಂದಾಯ ಮಾಡಿರುವುದಿಲ್ಲ ಮತ್ತು ವಿಷಯ ಹಾಗಿದ್ದಾಗ, ಸದರಿ ಚೆಕ್‌ಅನ್ನು ಯಾಕೆ ನೀಡಲಾಗಿತ್ತು ಎಂಬುದನ್ನು ಸಾಬೀತುಪಡಿಸುವ ಹೊಣೆಯು ಆರೋಪಿಯದ್ದಾಗಿದೆ.ಆದುದರಿಂದ, ಈಗಾಗಲೇ ನಾನು ಅಭಿಪ್ರಾಯಪಟ್ಟಂತೆ, ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ಪ್ರತಿವಾದಿಯು/ಆರೋಪಿಯು ಈ ಕಾರಣಗಳನ್ನು ಸಹ ಚರ್ಚೆಗೆ ತೆಗೆದುಕೊಂಡಿದ್ದನಾದರೂ, ಅಪೀಲಿನ ಆ ಕಾರಣಗಳನ್ನು ಅಪೀಲು ನ್ಯಾಯಾಲಯವು ಪ್ರಸ್ತಾಪಿಸಿಯೇ ಇರಲಿಲ್ಲ. ಆದರೆ, ಪ್ರಥಮ ಅಪೀಲು ನ್ಯಾಯಾಲಯವು ಆರೋಪಿಯು 172 ಶ್ರೀ ಅಶೋಕ್ ಕುಮಾರ್ ವಿರುದ್ಧ-ಪರಮೇಶ್ವರ ಬಿ.ಟಿ. ಎತ್ತಿದ ಇತರ ಕಾರಣಗಳನ್ನು ಪ್ರಸ್ತಾಪಿಸಿಲ್ಲ ಎಂಬ ಯಾವುದೇ ಕಾರಣವನ್ನಾಧರಿಸಿ ಅವರು ತೀರ್ಪನ್ನು ಪ್ರಶ್ನಿಸಿರುವುದಿಲ್ಲ.

15. ಆದುದರಿಂದ, ಮೇಲೆ ಹೇಳಿದ ಸಂಗತಿಗಳು ಮತ್ತು ಸಂದರ್ಭಗಳ ಕಡೆಗೆ ಗಮನ ಹರಿಸಲಾಗಿ, ಪ್ರತಿವಾದಿಯ/ಆರೋಪಿಯ ಒಳಸಂಚಿನ ಪ್ರವೃತ್ತಿಯನ್ನು ನ್ಯಾಯಾಲಯಗಳು ಪ್ರೋತ್ಸಾಹಿಸಬಾರದು.ಈ ಮೊಕದ್ದಮೆಯಲ್ಲಿ, ಒಪ್ಪಿಕೊಂಡಿರುವಂತೆ ಅಪೀಲು ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿರದೆ ಇರುವಾಗ, ಪ್ರಥಮ ಅಪೀಲು ನ್ಯಾಯಾಲಯವು ನೋಟೀಸು ಜಾರಿಯಾಗದ ಏಕೈಕ ಕಾರಣದ ಮೇಲೆ ಪ್ರತಿವಾದಿಯನ್ನು ಆರೋಪಿಯನ್ನು ಖುಲಾಸೆಗೊಳಿಸಿದ್ದ ಕಾರಣ, ಪ್ರಥಮ ಅಪೀಲು ನ್ಯಾಯಾಲಯದ ತೀರ್ಪಿನ ಬಗ್ಗೆ ಅವರು ಸಮ್ಮತಿ ಹೊಂದಿದ್ದರೆಂದು ಮತ್ತು ಇತರ ಸಂಗತಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಅವರಿಗೆ ಸಮಾಧಾನವಿತ್ತು ಎಂದು ಹೇಳದೆ ಇರಲಾಗುವುದಿಲ್ಲ.ಆದುದರಿಂದ, ಅವರು ಇತರ ಕಾರಣಗಳ ಆಧಾರದ ಮೇಲೆ ಪ್ರಥಮ ಅಪೀಲು ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸದೇ ಇರುವುದಕ್ಕೆ ತನ್ನನ್ನೇ ದೂಷಿಸಿಕೊಳ್ಳಬೇಕಾಗುತ್ತದೆ.

16. ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ನನಗೆ ಯಾವುದೇ ಸಮರ್ಥ ಕಾರಣ ಕಂಡುಬರುತ್ತಿಲ್ಲ ಮತ್ತು ಇನ್ನೊಂದೆಡೆ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಸರಿಯಾಗಿಯೇ ವಾದಿಸಿರುವಂತೆ, ಪ್ರಥಮ ಅಪೀಲು ನ್ಯಾಯಾಲಯವು, ನೋಟೀಸು ಜಾರಿಗೆ

ಸಂಬಂಧಿಸಿದಂತೆ ದಾಖಲೆಯಲ್ಲಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಸೂಕ್ತವಾಗಿ ವಿವೇಚಿಸಿರುವುದಿಲ್ಲ.ಆದುದರಿಂದ, ಸದರಿ ಕಾರಣಗಳಿಗಾಗಿ, ಪ್ರಥಮ ಅಪೀಲು ನ್ಯಾಯಾಲಯವು, ಆರೋಪಿಗೆ ನೋಟೀಸು ಜಾರಿಯಾಗಿಲ್ಲವೆಂದು ನಿರ್ಣಯಿಸುವಲ್ಲಿ ಗಂಭೀರ ಪ್ರಮಾದವನ್ನು ಎಸಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.ಆದ್ದರಿಂದ, ಪ್ರಥಮ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪು ತಳ್ಳಿಹಾಕಲು ಯೋಗ್ಯವಾಗಿದೆ.

17. ಈ ತೀರ್ಪನ್ನು ಬಿಟ್ಟು ಕೊಡುವ ಮೊದಲು, ಅಧಿಕಾರವ್ಯಾಪ್ತಿಯುಳ್ಳ ಪ್ರಥಮ ಅಪೀಲು ನ್ಯಾಯಾಲಯಗಳು, ಪ್ರಥಮ ಅಪೀಲುಗಳನ್ನು ಕುರಿತು ವ್ಯವಹರಿಸುವಾಗ, ಅಧಿವಿಚಾರಣಾ ನ್ಯಾಯಾಲಯದ ಪಾತ್ರವನ್ನು ನಿರ್ವಹಿಸಬೇಕಾಗಿಲ್ಲ ಎಂದು ಅವುಗಳಿಗೆ ನಿರ್ದೇಶಿಸುವುದು ಯುಕ್ತವಾಗಿದೆ ಮತ್ತು ಅವಶ್ಯಕವಾಗಿದೆ ಎಂಬುದು ನನ್ನ ಭಾವನೆ.ವಿವಿಧ ಕಾರಣಗಳನ್ನು ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ಮಂಡಿಸುವಾಗಲೆಲ್ಲ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಗಳ ಪರಾಮರ್ಶನೆಯೊಂದಿಗೆ ಅಪೀಲಿನಲ್ಲಿ ವಾದಿಸಿದ ಎಲ್ಲಾ ಕಾರಣಗಳನ್ನು ಪರೀಕ್ಷಿಸುವುದು ಪ್ರಥಮ ಅಪೀಲು ನ್ಯಾಯಾಲಯದ ಕರ್ತವ್ಯವಾಗಿದೆ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಯಾವುದೇ ದೋಷ ಅಥವಾ ತಪ್ಪನ್ನು ಎಸಗಿದೆಯೇ ಎಂಬ ನಿರ್ಣಯಕ್ಕೆ ಬರಲು ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ಅಪೀಲುದಾರರು ಎತ್ತಿದ ಪ್ರತಿಯೊಂದು ಮತ್ತು ಎಲ್ಲಾ ಕಾರಣಗಳನ್ನು ಪರೀಕ್ಷಿಸುವ ಕಾವ್ಯದಲ್ಲಿ ಉದ್ಯುಕ್ತವಾಗಬೇಕು.ಇಲ್ಲದೇ ಹೋದರೆ, ಅಪೀಲು ಕುರಿತು ವ್ಯವಹರಿಸುವ ಅನೌಪಚಾರಿಕ ಪದ್ಧತಿಯು ಅಪೀಲುದಾರರ ಹಕ್ಕುಗಳಿಗೆ ಬಾಧಕವಾಗುತ್ತದೆ ಅಥವಾ ಅವುಗಳನ್ನು ವಿಫಲಗೊಳಿಸುತ್ತದೆ.ಅಪೀಲಿನ ಉಪಬಂಧವನ್ನು ಕಲ್ಪಿಸಿದಾಗ, ಹಕ್ಕಿನ ವಿಷಯವಾಗಿ ಅಪೀಲುದಾರರು ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು, ಕಾನೂನುರೀತ್ಯಾ ಅನುಮತೀಯವಾದ ಎಷ್ಟೋ ಕಾರಣಗಳ ಮೇಲೆ ಪ್ರಶ್ನಿಸಬಹುದಾಗಿದೆ.

18. ಪ್ರಥಮ ಅಪೀಲು ನ್ಯಾಯಾಲಯವು ಕಾನೂನಿನ ಸಂಗತಿಗಳನ್ನು, ಎಂದರೆ ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನೊಂದಿಗೆ ಹಾಗೂ ಅಪೀಲು ನ್ಯಾಯಾಲಯದ ಅಧಿಕಾರಗಳು ಮತ್ತು ಅಧಿಕಾರವ್ಯಾಪಿಯೊಂದಿಗೆ ಅಪೀಲು ನ್ಯಾಯಾಲಯವು ಹೇಗೆ ವ್ಯವಹರಿಸಬೇಕು ಎಂಬ ಸಂಗತಿಗಳ ಕಡೆಗೆ ಅದರ ಗಮನವನ್ನು ನೀಡಿರುವುದಿಲ್ಲ.ಅಪೀಲು ನ್ಯಾಯಾಲಯಗಳ ಹೊಣೆಗಾರಿಕೆ ಮತ್ತು ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಅವುಗಳಿಗೆ ನೆನಪಿಸುವುದು ಸೂಕ್ತ ಮತ್ತು ಅವಶ್ಯಕ ಎಂದು ನಾನು ಭಾವಿಸುತ್ತೇನೆ.ಈ ಸಂದರ್ಭದ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 354 ನೇ ಪ್ರಕರಣದ ಅಡಿಯಲ್ಲಿ ಕಲ್ಪಿಸಿದ ಉಪಬಂಧದೊಂದಿಗೆ ನಾನು ಪ್ರಾರಂಭಿಸುತ್ತಿದ್ದು, ಅದನ್ನು ಈ ಮುಂದಿನಂತೆ ಒದಗಿಸಲಾಗಿದೆ:

"354. ತೀರ್ಪಿನ ಭಾಷೆ ಮತ್ತು ಒಳಾಂಶಗಳು:- ( 1) ಈ ಸಂಹಿತೆಯಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, 353 ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ತೀರ್ಪು,

( ಎ) ನ್ಯಾಯಾಲಯದ ಭಾಷೆಯಲ್ಲಿ ಬರೆಯಲ್ಪಟ್ಟಿರತಕ್ಕದ್ದು;

(ಬಿ) ನಿರ್ಧರಿಸಬೇಕಾದ ಅಂಶ ಅಥವಾ ಅಂಶಗಳನ್ನು, ಅವುಗಳ ಮೇಲಿನ ತೀರ್ಮಾನ ಮತ್ತು ತೀರ್ಮಾನದ ಕಾರಣಗಳನ್ನು ಒಳಗೊಂಡಿರತಕ್ಕದ್ದು;

(ಸಿ) ಯಾವ ಅಪರಾಧಕ್ಕಾಗಿ (ಯಾವುದಾದರೂ ಇದ್ದರೆ) ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಆ ಅಪರಾಧವನ್ನು ಮತ್ತು ಭಾರತ ದಂಡ ಸಂಹಿತೆಯ (1860 ರ 45 ರ) ಯಾವ ಪ್ರಕರಣದ ಮೇರೆಗೆ ಅಥವಾ ಯಾವ ಇತರ ವಿಧಿ ಯ ಮೇರೆಗೆ ಆತನನ್ನು ಅಪರಾಧಿಯೆ ೦ ದು ನಿರ್ಣಯಿಸಲಾಗಿದೆಯೋ ಅದನ್ನು ಮತ್ತು ಅವನಿಗೆ ಆದೇಶಿಸಿದ ದಂಡನೆಯನ್ನು ನಿರ್ದಿಷ್ಟಪಡಿಸತಕ್ಕದ್ದು;

(ಡಿ) ಅದು ನಿರಪರಾಧಿಯೆಂಬ ತೀರ್ಪಾಗಿದ್ದರೆ, ಯಾವ ಅಪರಾಧದ ಬಗ್ಗೆ ಆಪಾದಿತನನ್ನು ನಿರಪರಾಧಿ ಎಂದು ತೀರ್ಮಾನಿಸಲಾಯಿತೋ ಆ ಅಪರಾಧವನ್ನು ಹೇಳತಕ್ಕದ್ದು ಮತ್ತು ಆತನನ್ನು ಸ್ವತಂತ್ರಗೊಳಿಸಬೇಕೆಂದು ನಿರ್ದೇಶಿಸತಕ್ಕದ್ದು.

( 2) ಅಪರಾಧ ನಿರ್ಣಯವನ್ನು ಭಾರತ ದಂಡ ಸಂಹಿತೆಯ (1860 ರ 45) ಮೇರೆಗೆ ಮಾಡಲಾಗಿದ್ದರೆ ಮತ್ತು ಆ ಸಂಹಿತೆಯ ಎರಡು ಪ್ರಕರಣಗಳಲ್ಲಿ ಯಾವುದಕ್ಕೆ ಅಥವಾ ಒಂದೇ ಪ್ರಕರಣದ ಎರಡು ಭಾಗಗಳಲ್ಲಿ ಯಾವುದಕ್ಕೆ ಆ ಅಪರಾಧವು ಒಳಪಡುತ್ತದೆ ಎಂಬ ಬಗ್ಗೆ ಸಂಶಯವಿರುವಾಗ, ನ್ಯಾಯಾಲಯವು ಅದನ್ನು ಸ್ಪಷ್ಟವಾಗಿ ಹೇಳತಕ್ಕದ್ದು ಮತ್ತು ಪರ್ಯಾಯ ತೀರ್ಪು ಕೊಡತಕ್ಕದ್ದು.

( 3) ಮರಣದಂಡನೆಯಿಂದ ಅಥವಾ ಅದರ ಬದಲಾಗಿ ಆಜೀವ ಕಾರಾವಾಸದಿಂದ ಅಥವಾ ಕೆಲವು ವರ್ಷಗಳ ಅವಧಿಯ ಕಾರಾವಾಸದಿ 0 ದ ದಂಡನೀಯನಾಗುವ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದಾಗ, ಆ ದಂಡಾದೇಶದ ಕಾರಣಗಳನ್ನು ಮತ್ತು ಮರಣ ದಂಡನೆಯ ಸಂದರ್ಭದಲ್ಲಿ ಅಂಥ ದಂಡಾದೇಶದ ವಿಶೇಷ ಕಾರಣಗಳನ್ನು, ತೀರ್ಪಿನಲ್ಲಿ ಹೇಳತಕ್ಕದ್ದು.

(4) ಒ ೦ ದು ವರ್ಷ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದಾಗ, ಆದರೆ ಮೂರು ತಿಂಗಳಿಗಿಂತ ಕಡಿಮೆ ಅವಧಿಯ ಕಾರಾವಾಸವನ್ನು ನ್ಯಾಯಾಲಯವು ವಿಧಿಸಿದರೆ, ಅದು ನ್ಯಾಯಾಲಯವು ಬರಖಾಸ್ತಾಗುವವರೆಗಿನ ಕಾರಾವಾಸದ ದ ೦ ಡಾದೇಶವಾದ ಹೊರತು ಅಥವಾ ಈ ಸ ೦ ಹಿತೆಯ ಉಪಬಂಧಗಳ ಮೇರೆಗೆ ಮೊಕದ್ದಮೆಯನ್ನು ಸಂಕ್ಷಿಪ್ತವಾಗಿ ಆರೋಪ ವಿಚಾರಣೆ ಮಾಡಲಾಗಿದ್ದ ಹೊರತು, ಅಂಥ ದಂಡಾದೇಶವನ್ನು ನೀಡಲು ಇರುವ ಕಾರಣಗಳನ್ನು ಅದು ಅಭಿಲೇಖಿಸತಕ್ಕದ್ದು.

(5) ಯಾರೇ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸಿದರೆ, ಅವನು ಸಾಯುವವರೆಗೆ ಅವನ ಕುತ್ತಿಗೆಗೆ ನೇಣು ಹಾಕಬೇಕೆಂದು ಆ ದಂಡಾದೇಶವು ನಿರ್ದೇಶಿಸತಕ್ಕದ್ದು.

( 6) 117 ನೇ ಅಥವಾ 138 ನೇ ಪ್ರಕರಣದ ( 2) ನೇ ಒಳಪಕರಣದ ಮೇರೆಗಿನ ಪ್ರತಿಯೊಂದು ಆದೇಶವು ಮತ್ತು 125, 145 ನೇ ಅಥವಾ 147 ನೇ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಅಂತಿಮ ಆದೇಶವು, ನಿರ್ಧರಿಸಬೇಕಾದ ಅಂಶ ಅಥವಾ ಅಂಶಗಳನ್ನು, ಅವುಗಳ ಮೇಲಿನ ತೀರ್ಮಾನವನ್ನು ಮತ್ತು ತೀರ್ಮಾನದ ಕಾರಣಗಳನ್ನು ಒಳಗೊಂಡಿರತಕ್ಕದ್ದು. "

19. ಮೇಲೆ ಹೇಳಿದ ಉಪಬಂಧದ ಸೂಕ್ಷ್ಮ ವಿಶ್ಲೇಷಣೆಯ ನಂತರ, ತೀರ್ಪು,

i) ನಿರ್ಧರಣೆಗೆ ಉದ್ಭವಿಸುವ ಅಂಶಗಳನ್ನು

ii) ಅದರ ಮೇಲಿನ ನಿರ್ಣಯವನ್ನು, ಅದು ಅಪೀಲು ನ್ಯಾಯಾಲಯದ ಮುಂದೆ ವಾದಿಸಿದ ಎಲ್ಲಾ ಕಾರಣಗಳ ಆಧಾರದ ಮೇಲೆ ಅಭಿಪ್ರಾಯವನ್ನು ದಾಖಲಿಸುವ ರೀತಿಯಾಗಿರತಕ್ಕದ್ದು ಅಥವಾ ಅಧಿವಿಚಾರಣಾ ನ್ಯಾಯಾಲಯವು ರೂಪಿಸಿದ ಎಲ್ಲಾ ಆರೋಪಗಳ ಆಧಾರದ ಮೇಲೆ ಅಭಿಪ್ರಾಯವನ್ನು ದಾಖಲಿಸಬೇಕು;

iii) ಅಭಿಪ್ರಾಯ ಮತ್ತು ನಿರ್ಣಯಕ್ಕೆ ಇರುವ ಕಾರಣಗಳನ್ನು-ಒಳಗೊಳ್ಳತಕ್ಕದ್ದು;

ಆದುದರಿಂದ, ಒಂದು ತೀರ್ಪು ಸ್ಪಷ್ಟವಾಗಿ, ಕಾನೂನು ಸಂಗತಿಗಳನ್ನು ಮತ್ತು ವಾದಿಸಲಾದ ಅಂಶಗಳನ್ನು ಆಧರಿಸಿದ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸಿದೆ ಎಂಬುದನ್ನು ತೀರ್ಪನ್ನು ಹೊರಡಿಸುವಾಗ ಸೂಚಿಸಬೇಕು.ಮೇಲೆ ಹೇಳಿದ ಅಗತ್ಯತೆಯನ್ನು ಪಾಲಿಸುವುದು ಔಪಚಾರಿಕತೆ ಮಾತ್ರವಾಗಿರದೆ, ಸ್ವರೂಪದಲ್ಲಿ ಯಥಾರ್ಥವಾಗಿರಬೇಕು.ಕಾರಣಗಳನ್ನು ಸೂಕ್ತವಾಗಿ ರೂಪಿಸದೇ ಇದ್ದಾಗ ಮತ್ತು ಅಭಿಪ್ರಾಯಗಳು ಕಾರಣಗಳಿಗನುಸಾರವಾಗಿ ಇರದಿದ್ದಾಗ, ಅಂಥ ತೀರ್ಪುಗಳು ನ್ಯಾಯಿಕ ವಿಮರ್ಶೆಯಲ್ಲಿ ಊರ್ಜಿತವಾಗುವುದಿಲ್ಲ.ನ್ಯಾಯಾಲಯಗಳು ತಲುಪಿದ ನಿರ್ಣಯಕ್ಕೆ ಅವು ನೀಡುವ ಕಾರಣಗಳು, ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳ ಆಧಾರದ ಮೇಲೆ ತಿಳುವಳಿಕೆ ನೀಡುವಂತಿರಬೇಕು.ಆದುದರಿಂದ, ತೀರ್ಮಾನಕ್ಕೆ ಬರುವುದು ಅಥವಾ ಸಾಕ್ಷಿದಾರರ ಹೇಳಿಕೆಗಳ ಪುನರುಚ್ಚರಣೆ ಯು ಪರಾಪ್ತವಾಗುವುದಿಲ್ಲವಾದರೂ, ಪುರಾವೆಯನ್ನಾಧರಿಸಿದ ಕಾನೂನಿನ ಮತ್ತು ವಾಸ್ತವಿಕ ಸಂಗತಿಗಳ ಸೂಕ್ಷ್ಮ ಎಸಿ ವಿಶ್ಲೇಷಣೆ ಮತ್ತು ಮೌಲ್ಯ ನಿರ್ಣಯವು ಖಂಡಿತವಾಗಿಯೂ ಅತ್ಯಗತ್ಯ.

20. ಮೇಲೆ ಹೇಳಿದ ಸಂಗತಿಗಳ ಹಿನ್ನೆಲೆಯಲ್ಲಿ, ಅಪೀಲು ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ 387 ನೇ ಪ್ರಕರಣವು ನನಗೆ ಸ್ಮರಣೆಗೆ ಬರುತ್ತದೆ, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"387. ಅಧೀನ ಅಪೀಲು ನ್ಯಾಯಾಲಯದ ತೀರ್ಪುಗಳು.-ಅಸಲು ಅಧಿಕಾರ ವ್ಯಾಪ್ತಿಯ ಕ್ರಿಮಿನಲ್ ನ್ಯಾಯಾಲಯದ ತೀರ್ಪುಗಳ ಬಗ್ಗೆ ಅಧ್ಯಾಯ-XXVII ರಲ್ಲಿರುವ ನಿಯಮಗಳು, ಸೆಷನ್ಸ್ ನ್ಯಾಯಾಲಯವು ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಪೀಲಿನಲ್ಲಿ ಮಾಡುವ ತೀರ್ಪಿಗೂ, ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸತಕ್ಕದ್ದು:

ಪರಂತು, ಅಪೀಲು ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು, ತೀರ್ಪನ್ನು ಕೇಳಲು ಆಪಾದಿತನನ್ನು ಕರೆಸತಕ್ಕದ್ದಲ್ಲ ಅಥವಾ ಹಾಜರಾಗಲು ಅಗತ್ಯಪಡಿಸತಕ್ಕದ್ದಲ್ಲ.

21. ಮೇಲೆ ಹೇಳಿದ ಉಪಬಂಧವು ಸೂಚಿಸುವುದೇನೆಂದರೆ, ಮೂಲ ಅಧಿಕಾರವ್ಯಾಪ್ತಿಯುಳ್ಳ ಕ್ರಿಮಿನಲ್ ನ್ಯಾಯಾಲಯದ ತೀರ್ಪಿನ ಉಲ್ಲೇಖದೊಂದಿಗೆ, ಅಧ್ಯಾಯ-XXVII ರಲ್ಲಿರುವ ನಿಯಮಗಳು ಹಾಗೂ ತೀರ್ಪಿನ ಒಳಾಂಶಗಳಿಗೆ ಸಂಬಂಧಿಸಿದಂತೆ ಅದೇ ಕಾರವಿಧಾನವನ್ನು, ಅಪೀಲು ನ್ಯಾಯಾಲಯವು ಮೂಲ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆಯೋ ಎಂಬಂತೆ ಅಪೀಲು ನ್ಯಾಯಾಲಯಗಳು ಸಹ ಅನುಸರಿಸಬೇಕು.ಆದುದರಿಂದ, ಅಪೀಲು ನ್ಯಾಯಾಲಯವು ವಾಸ್ತವವಾಗಿ ಮೂಲ ನ್ಯಾಯಾಲಯದ ರೀತಿಯಲ್ಲೇ ಕಾರ್ಯನಿರ್ವಹಿಸಬೇಕು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 354 ನೇ ಪ್ರಕರಣದ ಮೇರೆಗಿನ ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು ತೀರ್ಪನ್ನು ಬರೆಯಬೇಕು ಎಂದು ಹೇಳದೆ ವಿಧಿಯಿಲ್ಲ.

22. ' ಅಪೀಲು ನ್ಯಾಯಾಲಯದ ತೀರ್ಪು ಹೇಗಿರಬೇಕು ' ಎಂಬುದನ್ನು ಚರ್ಚಿಸುವ ಮೊದಲು, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಪದ್ಯಾಲೋಚಿಸಿದ ಅಪೀಲು ನ್ಯಾಯಾಲಯಗಳ ಅಧಿಕಾರಗಳನ್ನು ನಾನು ಸಂಕ್ಷಿಪ್ತವಾಗಿ ಚರ್ಚಿಸಬಯಸುತ್ತೇನೆ.ಅವುಗಳನ್ನು ಈ ಕೆಳಗಿನಂತೆ ಒದಲಾಗಿದೆ:

"386. ಅಪೀಲು ನ್ಯಾಯಾಲಯದ ಅಧಿಕಾರಗಳು.-ಅಂಥ ಅಭಿಲೇಖವನ್ನು ಪರಿಶೀಲಿಸಿ ಮತ್ತು ಅಪೀಲುದಾರರನ್ನು ಅಥವಾ ಆತನ ಫೀಡರ್ ಹಾಜರಾದರೆ, ಅವನನ್ನು ಮತ್ತು ಸರ್ಕಾರಿ ಪ್ರಾಸಿಕ್ಯೂಟರ್ ಹಾಜರಾದರೆ, ಅವನನ್ನು ಮತ್ತು 377 ನೇ ಅಥವಾ 378 ನೇ ಪ್ರಕರಣದ ಮೇರೆಗಿನ ಒಂದು ಅಪೀಲಿನ ಸಂದರ್ಭದಲ್ಲಿ ಆಪಾದಿತನು ಹಾಜರಾದರೆ, ಅವನನ್ನು ವಿಚಾರಣೆ ಮಾಡಿದ ತರುವಾಯ, ಅಪೀಲು ನ್ಯಾಯಾಲಯವು, ಹಸ್ತಕ್ಷೇಪಕ್ಕೆ ಸಾಕಷ್ಟು ಕಾರಣವಿಲ್ಲವೆಂದು ಪರ್ಯಾಲೋಚಿಸಿದರೆ, ಅಪೀಲನ್ನು ವಜಾ ಮಾಡಬಹುದು, ಅಥವಾ-

(ಎ) ನಿರಪರಾಧಿಯ ನಿರ್ಣಯದ ಮೇಲಿನ ಅಪೀಲಿನಲ್ಲಿ, ಅಂಥ ನಿರ್ಣಯವನ್ನು ವಿಪರ್ಯಯಗೊಳಿಸಬಹುದು ಮತ್ತು ಸಂದರ್ಭಾನುಸಾರ ಮತ್ತಷ್ಟು ವಿಚಾರಣೆಯನ್ನು ಮಾಡಬೇಕೆಂದು ಅಥವಾ ಆಪಾದಿತನನ್ನು ಮರು ಆರೋಪ ವಿಚಾರಣೆ ಮಾಡಬೇಕೆಂದು ಅಥವಾ ಆರೋಪ ವಿಚಾರಣೆಗೆ ಒಪ್ಪಿಸಬೇಕೆಂದು ನಿರ್ದೇಶಿಸಬಹುದು ಅಥವಾ ಅವನು ತಪ್ಪಿತಸ್ಥನೆಂದು ನಿರ್ಣಯಿಸಿ ಕಾನೂನಿಗನುಸಾರವಾಗಿ ಅವನಿಗೆ ದ 0 ಡಾದೇಶ ಮಾಡಬಹುದು.

(ಬಿ) ಅಪರಾಧ ನಿರ್ಣಯದ ಮೇಲೆ ಹೂಡಲಾದ ಅಪೀಲಿನಲ್ಲಿ-

(i) ನಿರ್ಣಯವನ್ನು ಮತ್ತು ದಂಡಾದೇಶವನ್ನು ವಿಪರ್ಯಯ ಮಾಡಬಹುದು ಮತ್ತು ಆಪಾದಿತನನ್ನು ನಿರಪರಾಧಿಯೆ 0 ದು ನಿರ್ಣಯಿಸಬಹುದು ಅಥವಾ ವಿಮೋಚನೆಗೊಳಿಸಬಹುದು ಅಥವಾ ಅಂಥ ಅಪೀಲು ನ್ಯಾಯಾಲಯಕ್ಕೆ ಅಧೀನವಾದ ಸಕ್ಷಮ ಅಧಿಕಾರ ವ್ಯಾಪ್ತಿಯಿರುವ ನ್ಯಾಯಾಲಯವು ಅವನು ಮರು-ಆರೋಪ ವಿಚಾರಣೆ ಮಾಡಬೇಕೆ ೦ ದು ಅಥವಾ ಆರೋಪ ವಿಚಾರಣೆ ಒಪ್ಪಿಸಬೇಕೆಂದು ಆದೇಶಿಸಬಹುದು; ಅಥವಾ

(ii) ದಂಡಾದೇಶವನ್ನು ಉಳಿಸಿಕೊಂಡು, ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥ ವಾ ಬದಲಾಯಿಸದೆ, ದಂಡಾದೇಶದ ಸ್ವರೂಪ ಅಥವಾ ವ್ಯಾಪ್ತಿಯನ್ನು ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು ಬದಲಾಯಿಸಬಹುದು.ಆದರೆ ಅದನ್ನು ಹೆಚ್ಚಿಸದಂತೆ ಬದಲಾಯಿಸಬೇಕು;

(ಸಿ) ದಂಡಾದೇಶವನ್ನು ಹೆಚ್ಚಿಸುವ ಬಗ್ಗೆ ಹೂಡಲಾದ ಅಪೀಲಿನಲ್ಲಿ,

(i) ನಿರ್ಣಯವನ್ನು ಮತ್ತು ದಂಡಾದೇಶವನ್ನು ವಿಪರ್ಯಯಗೊಳಿಸಬಹುದು ಮತ್ತು ಆಪಾದಿತನನ್ನು ನಿರಪರಾಧಿಯೆಂದು ನಿರ್ಣಯಿಸಬಹುದು ಅಥವಾ ವಿಮೋಚನೆಗೊಳಿಸಬಹುದು ಅಥವಾ ಅಪರಾಧದ ಆರೋಪ ವಿಚಾರಣೆ ಮಾಡಲು ಸಕ್ಷಮವಾದ ನ್ಯಾಯಾಲಯವು ಅವನನ್ನು ಮರು ಆರೋಪ ವಿಚಾರಣೆ ಮಾಡಬೇಕೆಂದು ಆದೇಶಿಸಬಹುದು; ಅಥವಾ

(ii) ದ ೦ ಡಾದೇಶವನ್ನು ಉಳಿಸಿಕೊಂಡು ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥವಾ ಬದಲಾಯಿಸದೆ, ದಂಡಾದೇಶದ ಸ್ವರೂಪ ಅಥವಾ ವ್ಯಾಪ್ತಿಯನ್ನು, ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು, ಅದನ್ನು ಹೆಚ್ಚಿಸಲು ಅಥವಾ ತಗ್ಗಿಸಲು ಬದಲಾಯಿಸ ಬಹುದು;

(ಡಿ) ಇತರ ಯಾವುದೇ ಆದೇಶದ ಮೇಲೆ ಹೂಡಲಾದ ಅಪೀಲಿನಲ್ಲಿ, ಅಂಥ ಆದೇಶವನ್ನು ಬದಲಾಯಿಸಬಹುದು ಅಥವಾ ವಿಪರ್ಯಯಗೊಳಿಸಬಹುದು;

(ಇ) ನ್ಯಾಯಸಮ್ಮತವಾಗಬಹುದಾದ ಅಥವಾ ಯುಕ್ತವಾಗ ಬಹುದಾದ ಯಾವುದೇ ತಿದ್ದುಪಡಿಯನ್ನು ಅಥವಾ ಯಾವುದೇ ಆನುಷಂಗಿಕ ಅಥವಾ ಪ್ರಾಸಂಗಿಕ ಆದೇಶವನ್ನು ಮಾಡಬಹುದು;

ಪರಂತು, ದಂಡನೆಯನ್ನು ಹೆಚ್ಚಿಸುವುದರ ವಿರುದ್ಧ ಕಾರಣ ತೋರಿಸಲು ಯುಕ್ತವಾದ ಅವಕಾಶವನ್ನು ಆಪಾದಿತನಿಗೆ ಕೊಟ್ಟ ಹೊರತು, ಆ ದಂಡನೆಯನ್ನು ಹೆಚ್ಚಿಸತಕ್ಕದ್ದಲ್ಲ;

ಮತ್ತೂ ಪರಂತು, ಅಪೀಲಿನಲ್ಲಿರುವ ಆದೇಶ ಅಥವಾ ದಂಡಾದೇಶವನ್ನು ಮಾಡಿದ ನ್ಯಾಯಾಲಯವು ಆ ಅಪರಾಧಕ್ಕಾಗಿ ವಿಧಿಸಬಹುದಾದುದಕ್ಕಿಂತ ಹೆಚ್ಚಿನ ದಂಡನೆಯನ್ನು ಅಪೀಲು ನ್ಯಾಯಾಲಯವು ಆಪಾದಿತನು ಮಾಡಿರುವನೆಂದು ತಾನು ಅಭಿಪ್ರಾಯಪಡುವ ಅಪರಾಧಕ್ಕಾಗಿ ವಿಧಿಸತಕ್ಕದ್ದಲ್ಲ."

23. ಮೇಲೆ ಹೇಳಿದ ಉಪಬಂಧವನ್ನು ಸರಳವಾಗಿ ಅರ್ಥೈಸಿಕೊಂಡಲ್ಲಿ, ಅಪೀಲು ನ್ಯಾಯಾಲಯಗಳು ವ್ಯಾಪಕ ಅಧಿಕಾರಗಳನ್ನು ಹೊಂದಿವೆ ಎಂಬುದು ತಿಳಿದುಬರುತ್ತದೆ.ಅಪೀಲು ನ್ಯಾಯಾಲಯಗಳು ದಾಖಲೆಗಳನ್ನು ತರಿಸಿಕೊಳ್ಳದೆಯೇ, ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಪರಾಪ್ತ ಕಾರಣಗಳ ಇಲ್ಲದೆ ಇದ್ದರೆ, ತಡ ಮಾಡದೇ ಅಪೀಲನ್ನು ವಜಾಗೊಳಿಸಬಹುದಾಗಿದೆ.ಅದು ಸಂದರ್ಭಾನುಸಾರ, ಆದೇಶವನ್ನು ವಿಪರಯಗೊಳಿಸುವ ಅಥವಾ ಹೆಚ್ಚಿನ ವಿಚಾರಣೆಗೆ ನಿರ್ದೇಶಿಸುವ ಅಥವಾ ಆರೋಪಿಯನ್ನು ಮರು-ವಿಚಾರಣೆ ನಡೆಸುವ ಸಂಪೂರ್ಣ ಅಧಿಕಾರವನ್ನು ಹೊಂದಿದೆ.ಅಪರಾಧ ನಿರ್ಣಯದ ಅಪೀಲಿನಲ್ಲಿ, ತೀರ್ಮಾನವನ್ನು ವಿಪತ್ಯಯಗೊಳಿಸುವ ಹಾಗೂ ಆರೋಪಿಯನ್ನು ಖುಲಾಸೆಗೊಳಿಸುವ ಅಥವಾ ವಿಮೋಚನೆಗೊಳಿಸುವ ಅಥವಾ ಆತನನ್ನು ಮರು-ವಿಚಾರಣೆ ಮಾಡುವ ವ್ಯಾಪಕ ಅಧಿಕಾರವನ್ನು ನ್ಯಾಯಾಲಯವು ಹೊಂದಿದೆ.ಅದು, ಶಿಕ್ಷೆಯನ್ನು ಸಮರ್ಥಿಸುವ ತೀರ್ಮಾನವನ್ನು ಬದಲಿಸುವ ಅಥವಾ ತೀರ್ಮಾನವನ್ನು ಬದಲಿಸದೆ, ಶಿಕ್ಷೆಯ ಸ್ವರೂಪ ಅಥವಾ ಶಿಕ್ಷೆಯ ವ್ಯಾಪ್ತಿ, ಇತ್ಯಾದಿಯನ್ನು ಬದಲಿಸಬಹುದಾಗಿದೆ.ಶಿಕ್ಷೆಯನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದ ಅಪೀಲಾಗಿದ್ದರೆ, ಆಗ ತೀರ್ಮಾನ ಮತ್ತು ಶಿಕ್ಷೆಯನ್ನು ವಿಪರಿಯಗೊಳಿಸುವ ಹಾಗೂ ಆರೋಪಿಯನ್ನು ಖುಲಾಸೆಗೊಳಿಸುವ D ಅಥವಾ ವಿಮೋಚನೆಗೊಳಿಸುವ ಅಥವಾ ಆರೋಪಿಯನ್ನು ಮರು-ವಿಚಾರಣೆ ಮಾಡುವ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 386 (ಸಿ) ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಶಿಕ್ಷೆಯನ್ನು ಹೆಚ್ಚಿಸುವ ವ್ಯಾಪಕ ಅಧಿಕಾರವನ್ನು ಸಹ ನ್ಯಾಯಾಲಯವು ಹೊಂದಿದೆ.ಆದಾಗ್ಯೂ, ನ್ಯಾಯಾಲಯದ ಅಭಿಪ್ರಾಯದಲ್ಲಿ ಆರೋಪಿಯು ಎಸಗಿರುವ ಅಪರಾಧಕ್ಕೆ, ಅಧಿವಿಚಾರಣಾ ನ್ಯಾಯಾಲಯವು ವಿಧಿಸಬಹುದಾಗಿರುವಂಥ ಹೆಚ್ಚಿನ ದಂಡನೆಯನ್ನು ವಿಧಿಸತಕ್ಕದ್ದಲ್ಲ.

24. ಅಪೀಲು ನ್ಯಾಯಾಲಯಗಳಲ್ಲಿ ಅಂಥ ವ್ಯಾಪಕ ಅಧಿ ಕಾರ ನಿಹಿತವಾಗಿರುವಾಗ, ಅಪೀಲು ನ್ಯಾಯಾಲಯಗಳ ಹೊಣೆಗಾರಿಕೆಯು ಮೂಲ ನ್ಯಾಯಾಲಯಗಳ ಹೊಣೆಗಾರಿಕೆಗಿಂಥ ಹೆಚ್ಚಾಗಿರುತ್ತದೆ.ಆದುದರಿಂದ, ಅಪೀಲು ನ್ಯಾಯಾಲಯವು, ನಿರ್ಣಯಕ್ಕೆ ಸಂಬಂಧಿಸಿದ ಅಂಶಗಳನ್ನು

ರೂಪಿಸಿದ ನಂತರ, ಕಾರಣಗಳನ್ನು ಮತ್ತು ಸ್ಥಿರ ಅಭಿಪ್ರಾಯಗಳನ್ನು ನೀಡುವ ಮೂಲಕ ಸ್ವಂತ ನಿರ್ಣಯಕ್ಕೆ ಬರುವ ಸಲುವಾಗಿ, ದಾಖಲೆಯಲ್ಲಿನ ಪುರಾವೆಯನ್ನಾಧರಿಸಿದ ಕಾನೂನಿನ ಮತ್ತು ವಾಸ್ತವಿಕ ಸಂಗತಿಗಳ ಕಡೆಗೆ ಸಹ ಹೊಸದಾಗಿ ಗಮನ ನೀಡಬೇಕು.ಆದುದರಿಂದ, ತೀರ್ಪಿನಲ್ಲಿ ಚರ್ಚೆ ಇಲ್ಲದ ಮತ್ತು ಪರಿಗಣನೆಗೆ ಅಂಶಗಳನ್ನು ರೂಪಿಸದೆ ಇದ್ದಲ್ಲಿ ಹಾಗೂ ಸೂಕ್ತ ಮತ್ತು ತಾರ್ಕಿಕ ಕಾರಣಗಳಿಲ್ಲದೆ, ಅಪೀಲುಗಳಲ್ಲಿ ವಾದಿಸಿದ ಎಲ್ಲಾ ಅಂಶಗಳ ಅಥವಾ ಕಾರಣಗಳ ಮೇಲೆ ನಿರ್ಣಯವನ್ನು ನೀಡಿದ್ದಲ್ಲಿ, ಅಂಥ ತೀರ್ಪ ಸೂಕ್ತ ತೀರ್ಪ ಆಗುವುದಿಲ್ಲ.ಅಪೀಲು ಉಪಬಂಧವು ಹಕ್ಕಿನ ವಿಷಯವಾಗಿ ಅಪೀಲನ್ನು ಸಲ್ಲಿಸುವ ಅಪೀಲುದಾರರಿಗೆ ನೀಡಿದ ಸುರಕ್ಷತೆಯಾಗಿದೆ.ಆದುದರಿಂದ, ಅಪೀಲುದಾರರ ವಾದವನ್ನು ಸೂಕ್ತವಾಗಿ ಪರಿಗಣಿಸಿಲ್ಲವೆಂದು ಅವರ ಮನಸ್ಸಿನಲ್ಲಿ ಇರುವ ಯಾವುದೇ ಸಂಶಯವನ್ನು ಹೋಗಲಾಡಿಸಲು, ಅಪೀಲು ನ್ಯಾಯಾಲಯಗಳು ಜಾಗರೂಕವಾಗಿರಬೇಕು.ಆದುದರಿಂದ, ಆಗಲೂ ಸಹ, ಅಪೀಲು ನ್ಯಾಯಾಲಯಗಳು, ಅಧಿವಿಚಾರಣಾ ನ್ಯಾಯಾಲಯಗಳ ಅಭಿಪ್ರಾಯಗಳನ್ನು, ಅಷ್ಟೇ ಅಲ್ಲದೆ ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯವನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂಬುದು ಹೆಚ್ಚು ಅವಶ್ಯಕವಾಗುತ್ತದೆ.ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿದೆ ಎಂದು ಸುಲಭವಾಗಿ ಹೇಳಿಬಿಡಬಹುದು.ಆದರೆ, ಪದಗಳನ್ನು ಬಳಸಿ ಹೇಳುವುದಷ್ಟೇ ಸಾಕಾಗುವುದಿಲ್ಲ ಮತ್ತು ಕಾನೂನು ಅಗತ್ಯತೆಯನ್ನು ಪಾಲಿಸಿದಂತೆ ಆಗುವುದಿಲ್ಲ; ಇನ್ನೊಂದೆಡೆ, ಅಪೀಲು ನ್ಯಾಯಾಲಯಗಳ ಮುಂದೆ ವಾದಿಸಿದ ವಿವಿಧ ಕಾರಣಗಳನ್ನು ನಿರೂಪಿಸಬೇಕು ಮತ್ತು ಪರಿಗಣಿಸಬೇಕು ಹಾಗೂ ಕಾರಣಗಳನ್ನು ಅನುಸರಿಸಿ ನಿರ್ಣಯಗಳನ್ನು ನೀಡಬೇಕು.

25. ತೀರ್ಪನ್ನು ಸ್ಥಿರೀಕರಿಸುವ ಸಲುವಾಗಿಯೂ ಸಹ, ಅಪೀಲು ನ್ಯಾಯಾಲಯಗಳು ಅಧಿವಿಚಾರಣಾ ನ್ಯಾಯಾಲಯದ ಕಾರಣಗಳನ್ನು ಸುಮ್ಮನೆ ಅಳವಡಿಸಿಕೊಳ್ಳಬಾರದು ಅಥವಾ ಪ್ರಶ್ನಿತ ಆದೇಶದಲ್ಲಿ/ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಕಾರಣವಿಲ್ಲವೆಂದು ಹೇಳಬಾರದು.ಅಂಥ ತೀರ್ಪುಗಳು, ದಂಡ ಪ್ರಕ್ರಿಯಾ ಸಂಹಿತೆಯ 354 ನೇ ಮತ್ತು 387 ನೇ ಪ್ರಕರಣಗಳ ಅಡಿಯಲ್ಲಿ ಪದ್ಯಾಲೋಚಿಸಿದಂಥ ಕಾನೂನಿನ ಅಗತ್ಯತೆಯನ್ನು ಸಹ ಅನುಪಾಲಿಸುವುದಿಲ್ಲ.ಯಾವುದೇ ಕಾರಣ ನೀಡದೆ, " ಇಡೀ ಸಾಕ್ಷ್ಯವನ್ನು ನಾನು ಎಚ್ಚರಿಕೆಯಿಂದ ಅವಲೋಕಿಸಿದ್ದೇನೆ ' ಮತ್ತು " ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ನಾನು ಅಂಗೀಕರಿಸಲಾಗುವುದಿಲ್ಲ ” ಎಂದು ಮಾತ್ರ ಹೇಳುವುದು, ಕಾನೂನಿನ ದೃಷ್ಟಿಯಲ್ಲಿ ತೀರ್ಪು ಎನಿಸುವುದಿಲ್ಲ.ಆದುದರಿಂದ, ಮೇಲೆ ಹೇಳಿದ ಉಪಬಂಧಗಳ ಅಗತ್ಯತೆಯನ್ನು ಅನುಪಾಲಿಸಲು ವಿಫಲವಾಗುವ ಅಪೀಲು ನ್ಯಾಯಾಲಯದ ತೀರ್ಪು 9, ಅಂಥ ತೀರ್ಪನ್ನು ದೂಷಿತಗೊಳಿಸುತ್ತದೆ.

26. ಆರೋಪಿಯನ್ನು ಮರು-ವಿಚಾರಣೆ ಮಾಡಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಸಾಕ್ಷ್ಯವನ್ನು ಹಿಂದಕ್ಕೆ ಕಳುಹಿಸುವುದಕ್ಕೆ ಅಥವಾ ಆದೇಶಿಸುವುದಕ್ಕೆ ಸಂಬಂಧಿಸಿದ ಅಪೀಲು ಅಧಿಕಾರಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಚರ್ಚಿಸುವುದು ಸುಸಂಗತವಾಗುವುದಿಲ್ಲವಾದರೂ, ಇಲ್ಲಿಯೇ ಆ ಅಂಶವನ್ನು ಪ್ರಸ್ತಾಪಿಸುವುದು ನ್ಯಾಯಯುತ ಮತ್ತು ಅಗತ್ಯ ಎಂದು ನಾನು ಭಾವಿಸುತ್ತೇನೆ.

27. ಮೇಲಿನ ಉಪಬಂಧಗಳನ್ನು ಅವಲೋಕಿಸಿದ ನಂತರ, ಅಪೀಲು ನ್ಯಾಯಾಲಯಗಳಲ್ಲಿ ವ್ಯಾಪಕ ಅಧಿಕಾರಗಳು ನಿಹಿತವಾಗಿದ್ದರೂ, ಸಾಮಾನ್ಯವಾಗಿ ಅಪೀಲು ನ್ಯಾಯಾಲಯಗಳು ಆರೋಪಿಯ ಮರು-ವಿಚಾರಣೆಗೆ ಆದೇಶಿಸುವ ಪ್ರಯತ್ನ ಮಾಡಬಾರದು.ಆದುದರಿಂದ ಅತ್ಯಂತ ವಿರಳ ಸಂದರ್ಭಗಳಲ್ಲಿ, ಹಿಂದಕ್ಕೆ ಕಳುಹಿಸುವುದಕ್ಕೆ ಅಥವಾ ಮರು-ವಿಚಾರಣೆ ನಡೆಸುವುದಕ್ಕೆ ಆದೇಶಿಸುವ ಅಧಿಕಾರಗಳನ್ನು, ನ್ಯಾಯದ

ಹಿತಾಸಕ್ತಿಯಲ್ಲಿರುವ ಸೂಕ್ತ, ಪರಾಪ್ತ ಮತ್ತು ಸಮರ್ಪಕ ಕಾರಣಗಳನ್ನು ನೀಡಿದ ನಂತರ ಮಾತ್ರ ಅಪರೂಪವಾಗಿ ಚಲಾಯಿಸಬೇಕು.ಇದು, ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಅಪೇಕ್ಷೆ ಇರುವ ಮೊಕದ್ದಮೆಗಳನ್ನು ಮಾತ್ರ ಒಳಗೊಳ್ಳಬೇಕು.ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಮೌಲ್ಯಮಾಪನ ಮಾಡಬೇಕು ಮತ್ತು ಅಧಿವಿಚಾರಣಾ ನ್ಯಾಯಾಲಯದ ಮುಂದಿನ ವ್ಯವಹರಣೆಗಳ ತೀರ್ಪಿನ ದೋಷ, ಕ್ರಮದೋಷಗಳು ಅಥವಾ ಕಾನೂನುಬಾಹಿರತೆಯ ಪಕ್ಷಪಾತದ ಧೋರಣೆಗೆ ತನ್ನ ಕಾರಣಗಳನ್ನು ನೀಡಬೇಕು.ನಿರುಪಾಧಿಕವಾಗಿ ಮರು-ವಿಚಾರಣೆಯನ್ನು ಸಮರ್ಥಿಸುವ ಅಂಥ ಸಂದರ್ಭಗಳಲ್ಲಿ ಮಾತ್ರವೇ, ಅದಕ್ಕೆ ಆದೇಶಿಸಬಹುದಾಗಿದೆ.ಸೂಕ್ತ ಆರೋಪಗಳನ್ನು ರೂಪಿಸುವ ಸಲುವಾಗಿ ಆರೋಪಿಯು ತನ್ನ ಸಾಕ್ಷ್ಯದಲ್ಲಿ ತಪ್ಪುದಾರಿಗೆಳೆದಲ್ಲಿ ಮತ್ತು ರೂಪಿಸಲಾದ ಆರೋಪಗಳ ಆಧಾರದ ಮೇಲೆ ಯಾವುದೇ ಸಾಕ್ಷ್ಯವು ನಿರ್ದೇಶಿಸದೆ ಇದ್ದಲ್ಲಿ, ಆರೋಪಗಳ ತಪ್ಪು ಸೇರ್ಪಡೆ ಅಥವಾ ಪಕ್ಷಕಾರರ ತಪ್ಪು ಸೇರ್ಪಡೆಯಾದಲ್ಲಿ, ಆಗ ನ್ಯಾಯಾಲಯವು, ಮರು-ಕಳುಹಿಸುವ ಅಥವಾ ಮರು-ವಿಚಾರಣೆಯ ಆದೇಶವು ಅವಶ್ಯಕವೇ ಎಂಬುದನ್ನು ಅತ್ಯಂತ ಎಚ್ಚರಿಕೆಯಿಂದ ಪರೀಕ್ಷಿಸಬೇಕು.ಸಾಮಾನ್ಯವಾಗಿ, ಸಾಕ್ಷ್ಯದಲ್ಲಿನ ಲೋಪಗಳನ್ನು ತುಂಬುವ ಸಲುವಾಗಿ ಹೆಚ್ಚಿನ ಮತ್ತು ಉತ್ತಮ ಸಾಕ್ಷ್ಯವನ್ನು ಹಾಜರುಪಡಿಸಲು, ಅಭಿಯೋಜಕರಿಗೆ ಅಥವಾ ಆರೋಪಿಗೆ ಮತ್ತೊಂದು ಅವಕಾಶ ನೀಡುವುದಕ್ಕೋಸ್ಕರ ಮರು-ವಿಚಾರಣೆಗೆ ಆದೇಶಿಸುವುದಿಲ್ಲ.ಆದುದರಿಂದ, ಹೊಸದಾಗಿ ವಿಚಾರಣೆಗೆ ಎಡೆ ಕೊಡುವ ಕೆಲವು ಕಾನೂನಿನ ಅಸ್ಥಿರತೆ ಇರದ ಹೊರತು, ಮರು-ವಿಚಾರಣೆಗೆ ಆದೇಶಿಸಬಾರದು.ಕಾನೂನುಬಾಹಿರತೆ ಎನಿಸುವ ಕಾನೂನುಬಾಹಿರತೆಗಳು ಅಥವಾ ಕ್ರಮದೋಷಗಳು ಇವೆ ಅಥವಾ ವ್ಯವಹರಣೆಗಳನ್ನು ಕುರಿತು ಒಟ್ಟಾರೆ ತಪ್ಪು ಕಲ್ಪನೆಯಾಗಿದೆ ಎಂದು ಅಪೀಲು ನ್ಯಾಯಾಲಯಕ್ಕೆ ಮನವರಿಕೆಯಾದ ಹೊರತು, ವಿರಳ ಸಂದರ್ಭಗಳಲ್ಲಿ ಮರು-ವಿಚಾರಣೆಯನ್ನು ನಡೆಸಬೇಕು ಹಾಗೂ ಮರು ವಿಚಾರಣೆಗೆ ಆದೇಶಿಸಿದ ಹೊರತು, ಅಪೀಲು ನ್ಯಾಯಾಲಯದ ಯುಕ್ತ ದೃಷಿಯಲ್ಲಿ ಮತ್ತು ಆರೋಪಿಗೆ ಬಹಳ ಬಾಧಕವಾಗುವಂತಿದ್ದಲ್ಲಿ, ಪಕ್ಷಕಾರರ ಹಕ್ಕುಗಳನ್ನು ಕುರಿತು ನ್ಯಾಯನಿರ್ಣಯಿಸಲಾಗುವುದಿಲ್ಲ.ಸಾಮಾನ್ಯವಾಗಿ ಮರು-ವಿಚಾರಣೆಯು ಮೊದಲಿನ ವ್ಯವಹರಣೆಗಳನ್ನು ಅಳಿಸಿಹಾಕುತ್ತದೆ ಎಂಬುದನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು.ಆದುದರಿಂದ, ಅಪೀಲು ನ್ಯಾಯಾಲಯವು, ಮರು ವಿಚಾರಣೆ ಅಗತ್ಯವೆಂಬ ನಿರ್ಣಯಕ್ಕೆ ಬಂದರೆ, ಆರೋಪಿಯನ್ನು ಪ್ರಾರಂಭದಿಂದಲೇ, ಎಂದರೆ ವಿಚಾರಣೆ ಪ್ರಾರಂಭವಾದ ಮೊದಲ ಹಂತದಿಂದ ಅಥವಾ ಇತರ ಯಾವುದೇ ಹಂತದಿಂದ ಮರು-ವಿಚಾರಣೆ ಮಾಡಬೇಕೆ ಎಂಬುದನ್ನು ಅದು ಸ್ಪಷ್ಟಪಡಿಸಬೇಕು.ನ್ಯಾಯಾಲಯಕ್ಕೆ ನ್ಯಾಯಯುತ ಮತ್ತು ಅವಶ್ಯಕವೆಂದು ಭಾವಿಸಿದರೆ, ಆಗ ಅದು, ವಿಚಾರಣಾ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಯಾವ ಹಂತದಿಂದ ಪ್ರಾರಂಭಿಸಬೇಕು ಎಂಬುದನ್ನು ನಿರ್ದಿಷ್ಟವಾಗಿ ಹೇಳಬಹುದಾಗಿದೆ.

28. ಅಪೀಲು ನ್ಯಾಯಾಲಯಗಳ ಅಧಿ ಕಾರಗಳನ್ನು ಮತ್ತು ಅಧಿಕಾರವ್ಯಾಪ್ತಿಯನ್ನು ಕುರಿತು ಚರ್ಚಿಸಿದ ನಂತರ, ಅಪೀಲು ನ್ಯಾಯಾಲಯಗಳ ಮೇಲಿನ ಸದರಿ ಅಧಿ ಕಾರಗಳ ಹಿನ್ನೆಲೆಯಲ್ಲಿ, ಆರೋಪಿಯನ್ನು ಖುಲಾಸೆಗೊಳಿಸುವುದಕ್ಕಾಗಲಿ ಅಥವಾ ಅಪರಾಧ ನಿರ್ಣಯಿಸುವುದಕ್ಕಾಗಲಿ ಅಥವಾ ಅಪರಾಧ ನಿರ್ಣಯದ ಅಥವಾ ಖುಲಾಸೆಗೊಳಿಸುವ ತೀರ್ಪನ್ನು ಕುರಿತು ವ್ಯವಹರಿಸುವುದಕ್ಕಾಗಲಿ, ಮೊಕದ್ದಮೆಯ ಎಲ್ಲಾ ಪ್ರಮುಖ ಲಕ್ಷಣಗಳ ಸಂಪೂರ್ಣ ಮತ್ತು ಸಮಗ್ರ ವಿಶ್ಲೇಷಣೆ ಮಾಡುವುದು ಅಧಿವಿಚಾರಣಾ ನ್ಯಾಯಾಲಯಗಳ ಮತ್ತು ಅಪೀಲು ನ್ಯಾಯಾಲಯಗಳ ಬಹು ದೊಡ್ಡ ಕರ್ತವ್ಯವಾಗಿದೆ ಎಂಬುದು ಸ್ಪಷ್ಟ.ದಾಖಲೆಯಲ್ಲಿ ತಂದ ಸಾಕ್ಷ್ಯಗಳನ್ನು ಸಮಗ್ರವಾಗಿ ಬಹಳ ಸೂಕ್ಷ್ಮವಾಗಿ ಮತ್ತು ಎಚ್ಚರಿಕೆಯಿಂದ

ಪರಿಶೀಲಿಸಬೇಕಾಗುತ್ತದೆ.ನ್ಯಾಯಾಧೀಶನ ಪ್ರಮುಖ ಪರಿಗಣನೆಯಾಗಿರುವ ' ನ್ಯಾಯವನ್ನು ಯುಕ್ತವಾಗಿ ನೀಡಲಾಗಿದೆ ' ಎಂದು ನೋಡಿಕೊಳ್ಳುವುದು ನ್ಯಾಯಾಧೀಶರ ಕರ್ತವ್ಯವಾಗಿದೆ.ವಹಿಸಲಾದ ಹೊಣೆಗಾರಿಕೆಯನ್ನು, ಲವಲೇಶವೂ ಅಥವಾ ಯಾವುದೇ ಒಂದೇ ಒಂದು ಕಾರಣಕ್ಕಾಗಿಯಾಗಲಿ, ಯಾವುದೇ ರೀತಿಯಲ್ಲೂ ತೊರೆಯಲಾಗುವುದಿಲ್ಲ ಅಥವಾ ಪರಿತ್ಯಜಿಸಲಾಗುವುದಿಲ್ಲ.ನ್ಯಾಯಾಲಯಗಳು ಸಾಕ್ಷ್ಯಗಳನ್ನು ಕಾನೂನುರೀತ್ಯಾ ಮತ್ತು ವಾಸ್ತವಿಕವಾಗಿ ತೂಗಿ ನೋಡಬೇಕಾದ ಹಾಗೂ ದಾಖಲೆಯಲ್ಲಿನ ಸಾಕ್ಷ್ಯಗಳ ಅಗತ್ಯ ವಿಶ್ಲೇಷಣೆಯಿಂದ ತಾರ್ಕಿಕವಾಗಿ ಹೊಮ್ಮುವ ಸಮರ್ಥ ಕಾರಣಗಳನ್ನು ಹೇಳಬೇಕಾದ ಅಗತ್ಯ ಸಹ ಇದೆ. ನಿರ್ಣಯವು ಅರ್ಥವಾಗದಂತೆ ಅಥವಾ ತರ್ಕವಿರುದ್ಧವಾಗಿರಬಾರದು.ಆದುದರಿಂದ, ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯಗಳನ್ನು ವಸ್ತುನಿಷ್ಠವಾಗಿ ಮತ್ತು ಪಕ್ಷಪಾತವಿಲ್ಲದೆ ಪರಿಗಣಿಸುವುದು ನ್ಯಾಯಾಧೀಶನ ಕರ್ತವ್ಯವಾಗಿದೆ.ಕಾರಣಗಳನ್ನು ಸವಿವರವಾಗಿ ವ್ಯಕ್ತಪಡಿಸಲಾಗಿದೆ ಎಂಬಂತೆ ಅವುಗಳನ್ನು ಅಡಕಗೊಳಿಸಿರಬೇಕು ಮತ್ತು ನ್ಯಾಯಾಧೀಶನ ಹಠಮಾರಿತನದ ಧೋರಣೆಯು ತೀರ್ಪಿನಿಂದಲೇ ವ್ಯಕ್ತವಾಗುವಂತಿರಬೇಕು.

29. ಪ್ರಸ್ತುತ ಮೊಕದ್ದಮೆಗೆ ಬರುವುದಾದರೆ, ಈಗಾಗಲೇ ನಾನು ಉಲ್ಲೇಖಿಸಿರುವಂತೆ, ಅಪೀಲುದಾರರು ವಾದಿಸಿದ ಕಾರಣಗಳನ್ನು ತೀರ್ಪಿನ ಮುಖ್ಯ ಭಾಗದಲ್ಲಿ ವಿವರವಾಗಿ ನಿರೂಪಿಸಲಾಗಿದೆಯಾದರೂ, ಅಪೀಲು ನ್ಯಾಯಾಲಯವು ಎಲ್ಲಾ ಕಾರಣಗಳನ್ನು ಪರಿಗಣಿಸಿರುವುದಿಲ್ಲ ಹಾಗೂ ನಿರ್ಣಯಗಳು ಮತ್ತು ಕಾರಣಗಳನ್ನು, ಆ ಕಾರಣಗಳು ಸಂಬಂಧಪಡುವಷ್ಟರಮಟ್ಟಿಗೆ ನೀಡಿರುವುದಿಲ್ಲ.ಈಗಾಗಲೇ ನಾನು ವ್ಯಕ್ತಪಡಿಸಿರುವಂತೆ, ಆರೋಪಿಯು, ಅಪೀಲು ನ್ಯಾಯಾಲಯದ ಸದರಿ ತೀರ್ಪನ್ನು ಪ್ರಶ್ನಿಸಲು ಪ್ರಾಶಸ್ತ್ಯ ನೀಡಿರುವುದಿಲ್ಲ ಮತ್ತು ಅವರ ಕಡೆಯಿಂದಾದ ಅಂಥ ಕೃತ್ಯಕ್ಕೆ ಅವರು ತಮ್ಮನ್ನೇ ದೂಷಿಸಿಕೊಳ್ಳಬೇಕಾಗುತ್ತದೆ.ಆದುದರಿಂದ, ಅಪೀಲು ನ್ಯಾಯಾಲಯವು ಪರಿಗಣಿಸಿದ ಕಾರಣದಷ್ಟರಮಟ್ಟಿಗೆ, ಅದರ ತೀರ್ಪ ತಳ್ಳಿಹಾಕಲು ಯೋಗ್ಯವಾಗಿದೆ.ವಾದಿಸಲಾದ ಇತರ ಕಾರಣಗಳನ್ನು ಅಪೀಲು ನ್ಯಾಯಾಲಯವು ಚರ್ಚಿಸಿರುವುದಿಲ್ಲ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಗಳಷ್ಟರಮಟ್ಟಿಗೆ ಅದರ ತೀರ್ಪು ಬದಲಾಗದೆ ಉಳಿಯುತ್ತದೆ ಎಂದು ಹೇಳದೆ ಇರಲಾಗುವುದಿಲ್ಲ.

30. ಮೇಲೆ ಹೇಳಿದ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಪ್ರಥಮ ಅಪೀಲು ನ್ಯಾಯಾಲಯದ ತೀರ್ಪು ಒಟ್ಟಾರೆಯಾಗಿ ತಳ್ಳಿಹಾಕಲು ಯೋಗ್ಯವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.ತದನುಸಾರವಾಗಿ, ನಾನು ಈ ಮುಂದಿನಂತೆ ಆದೇಶ ಹೊರಡಿಸಿದ್ದೇನೆ,

## ಆದೇಶ

ಅಪೀಲನ್ನು ಪುರಸ್ಕರಿಸಲಾಗಿದೆ.ತತ್ಪರಿಣಾಮವಾಗಿ, ಕ್ರಿಮಿನಲ್ ಅಪೀಲುಸಂಖ್ಯೆ: 390/2013 ರಲ್ಲಿ, ಪ್ರಥಮ ಅಪೀಲು ನ್ಯಾಯಾಲಯವಾದ ತ್ವರಿತ ಗತಿ ನ್ಯಾಯಾಲಯ-IV, ಬೆಂಗಳೂರು ನಗರ ಇದು ಹೊರಡಿಸಿದದಿನಾಂಕ: 07.07.2014 ರ ಖುಲಾಸೆ ತೀರ್ಪನ್ನು ಈ ಮೂಲಕ ತಳ್ಳಿ ಹಾಕಲಾಗಿದೆ ಹಾಗೂ ಅಧಿವಿಚಾರಣಾ ನ್ಯಾಯಾಲಯವಾದ XIII ನೇ ಹೆಚ್ಚುವರಿ ಸಿಎಮ್ಎಮ್ ನ್ಯಾಯಾಲಯ, ಬೆಂಗಳೂರು ಇದು ಸಿಸಿಸಂಖ್ಯೆ: 18350/2011,ದಿನಾಂಕ: 08.07.2013 ರಲ್ಲಿ ಹೊರಡಿಸಿದ ತೀರ್ಪು ಮತ್ತು ನೀಡಿದ ಶಿಕ್ಷೆಯನ್ನು ಈ ಮೂಲಕ ಸ್ಥಿರೀಕರಿಸಲಾಗಿದೆ.